ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಮಾರ್ಚ್ 10, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 298 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

# ಇನ್ನೂ ಹತ್ತು ವರ್ಷ ಕಾಲ 'ಗ್ಯಾರಂಟಿ'

## ಬಸ್ ಖರೀದಿ, ನೇಮಕಾತಿ, ಹೊಸ ರೂಟ್‌ಗಳ ಆರಂಭ: ಸಚಿವ ರಾಮಲಿಂಗಾರೆಡ್ಡಿ

ದಾವಣಗೆರೆ, ಮಾ. 9 - ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಾರಿಗೆ ಸಿಬ್ಬಂದಿ ನೇಮಕಾತಿ ಹಾಗೂ ಬಸ್ ಖರೀದಿ ಸ್ಥಗಿತವಾಗಿತ್ತು. ಕೊರೊನಾ ಕಾಲದಲ್ಲಿ 3,800 ಬಸ್‌ಗಳನ್ನೂ ನಿಲ್ಲಿಸಲಾಗಿತ್ತು. ಈಗ ನಮ್ಮ ಸರ್ಕಾರ ಬಸ್ ಖರೀದಿ ಹಾಗೂ ನೇಮಕಾತಿಯ ಜೊತೆ ಹೊಸ ಮಾರ್ಗಗಳಿಗೂ ಚಾಲನೆ ನೀಡುತ್ತಿದೆ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ಪುನರ್ ನಿರ್ಮಾಣಗೊಂಡಿರುವ ಮುಖ್ಯ ಬಸ್ ನಿಲ್ದಾಣ ಹಾಗೂ ಬೇತೂರು ರಸ್ತೆ ನೂತನ ಬಸ್ ನಿಲ್ದಾಣಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ 4 ವರ್ಷ ಒಂದೂ ಬಸ್ ಖರೀದಿಸಿರಲಿಲ್ಲ. ಹೀಗಾಗಿ ಕೊರೊನಾ ಸಂದರ್ಭದಲ್ಲಿ ಬಸ್‌ಗಳನ್ನು ನಿಲ್ಲಿಸಲಾಗಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಾರಿಗೆ ಸಂಸ್ಥೆಯ ನಾಲ್ಕು ನಿಗಮಗಳಿಗೆ 5,800 ಬಸ್‌ಗಳನ್ನು ಖರೀದಿಸಲಾಗುತ್ತಿದೆ ಎಂದು ಹೇಳಿದರು.

2016ರ ನಂತರದಿಂದ ಸಾರಿಗೆ ನಿಗಮಗಳಲ್ಲಿ ಯಾವುದೇ ನೇಮಕಾತಿ ಆಗಿಲ್ಲ. ಈಗ 9 ಸಾವಿರ ಸಿಬ್ಬಂದಿ ನೇಮಕಾತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಕಲ್ಯಾಣ ಕರ್ನಾಟಕ ವಲಯಕ್ಕೆ 1619 ಸಿಬ್ಬಂದಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ. ಮೂರ್ನಾಲ್ಕು ತಿಂಗಳಲ್ಲಿ ಉಳಿದವರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಹೇಳಿದರು.

ಕೊರೊನಾ ಸಂದರ್ಭದಲ್ಲಿ ನಿಲ್ಲಿಸಲಾಗಿದ್ದ ಮಾರ್ಗಗಳು ಪುನರಾರಂಭವಾಗುವ ಜೊತೆಗೆ, ಹೊಸ ಮಾರ್ಗಗಳಲ್ಲೂ ಬಸ್‌ಗಳಿಗೆ ಚಾಲನೆ ನೀಡಲಾಗುವುದು ಎಂದು ಸಚಿವರು ತಿಳಿಸಿದರು.

ಬಡವರ ಪರವಾದ **(2ನೇ ಪುಟಕ್ಕೆ)**




ಶನಿವಾರ ನಡೆದ ಬಸ್ ನಿಲ್ದಾಣ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಪಘಾತ ರಹಿತವಾಗಿ ಸೇವೆ ಸಲ್ಲಿಸಿದ ಚಾಲಕರಿಗೆ ಬೆಳ್ಳಿ ಪದಕ ವಿತರಿಸಲಾಯಿತು.

## ಕೆಎಸ್ಸಾರ್ಟಿಸಿ ಮುಖ್ಯ ಬಸ್ ನಿಲ್ದಾಣಕ್ಕೆ ಪಂಪಾಪತಿ ಹೆಸರು

### ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಸಹಮತ

ಕೆ.ಎಸ್.ಆರ್.ಟಿ.ಸಿ. ಮುಖ್ಯ ಬಸ್ ನಿಲ್ದಾಣಕ್ಕೆ ಮಾಜಿ ಶಾಸಕ ಪಂಪಾಪತಿ ಅವರ ಹೆಸರಿಡಬೇಕು ಎಂಬ ಬೇಡಿಕೆಗೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಸಹಮತ ವ್ಯಕ್ತಪಡಿಸಿದ್ದಾರೆ.

ಉದ್ಘಾಟನಾ ಸಭೆಯಲ್ಲಿ ಪಂಪಾಪತಿ ಹೆಸರಿಡುವ ಬೇಡಿಕೆ ಕುರಿತು ಮಾತನಾಡಿದ ರೆಡ್ಡಿ, ಪಂಪಾಪತಿ ಅವರ ಹೆಸರಿಡುವುದಕ್ಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರಾದ ಶಾಮನೂರು ಶಿವಶಂಕರಪ್ಪ, ಕೆ.ಎಸ್. ಬಸವಂತಪ್ಪ ಹಾಗೂ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರು ಸಮ್ಮತಿ ಸೂಚಿಸಿದ್ದಾರೆ ಎಂದರು. ಈ ಜಾಗದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಸ್ಥಾಪನೆಯಾಗಬೇಕೆಂದು ಪಂಪಾಪತಿ ಅವರು ಹೋರಾಟ ಮಾಡಿದ್ದರು. ಬಸ್ ನಿಲ್ದಾಣಕ್ಕೆ ಕಾರಣಕರ್ತರಾದವರನ್ನು ಸ್ಮರಿಸುವುದು ನಮ್ಮೆಲ್ಲರ ಜವಾಬ್ದಾರಿ. ಅವರ ಹೆಸರನ್ನು ಬಸ್ ನಿಲ್ದಾಣಕ್ಕೆ ಇಡುವ ಕೆಲಸ ಖಂಡಿತಾ ಆಗಲಿದೆ ಎಂದು ಸಚಿವರು ಹೇಳಿದರು.

## ಶಿವಶಂಕರಪ್ಪನವರು ಹೇಳುವವರಿಗೇ ಲೋಕಸಭಾ ಟಿಕೆಟ್: ಸಚಿವ ರೆಡ್ಡಿ

ದಾವಣಗೆರೆ, ಮಾ. 9 - ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದಾವಣಗೆರೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಜಮಾನರು (ಶಾಸಕ ಶಾಮನೂರು ಶಿವಶಂಕರಪ್ಪ) ಯಾರಿಗೆ ಹೇಳುತ್ತಾರೋ ಅವರಿಗೆ ಟಿಕೆಟ್ ಸಿಗಲಿದೆ ಎಂದು ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದ್ದಾರೆ. ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಉದ್ಘಾಟನಾ ಸಮಾರಂಭದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬರುವ 11ನೇ ತಾರೀಖಿನ ನಂತರ ಕಾಂಗ್ರೆಸ್ ಪಕ್ಷದ ಎರಡನೇ ಪಟ್ಟಿ ಬಿಡುಗಡೆಯಾಗಲಿದೆ ಎಂದು ಹೇಳಿದರು.

ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಟೀಕಿಸುತ್ತಿರುವುದನ್ನು ತಳ್ಳಿ ಹಾಕಿರುವ ರೆಡ್ಡಿ, ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಆರು ಸ್ಫೋಟಗಳು ಸಂಭವಿಸಿದ್ದವು ಎಂದು ತಿರುಗೇಟು ನೀಡಿದ್ದಾರೆ.

ಲೋಕಸಭೆಯಲ್ಲಿ ಸ್ಮೋಕ್ ಬಾಂಬ್ ಸಿಡಿಸಿದವರಿಗೆ ಸಂಸದ ಪ್ರತಾಪ್ ಸಿಂಹ ಪಾಸ್ ನೀಡಿದ್ದರು. ಅವರ ರಾಜೀನಾಮೆ ಕೇಳದವರು, ಸಂಸದ ಸೈಯದ್ ನಾಸಿರ್ ಹುಸೇನ್ ರಾಜೀನಾಮೆ ಕೇಳುತ್ತಿದ್ದಾರೆ ಎಂದೂ ರೆಡ್ಡಿ ತರಾಟೆಗೆ ತೆಗೆದುಕೊಂಡರು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಸುಧಾರಿಸಿದೆ. ಅಹಿತಕರ ಘಟನೆ ಆಗದಂತೆ ಕ್ರಮ ವಹಿಸಲಾಗುವುದು ಎಂದೂ ಅವರು ಹೇಳಿದರು.





## ಬಿಜೆಪಿ - ಟಿಡಿಪಿ ಮೈತ್ರಿಗೆ ಸಮ್ಮತಿ

ನವದೆಹಲಿ, ಮಾ. 9 - ಮುಂಬರುವ ಲೋಕಸಭಾ ಚುನಾವಣೆ ಹಾಗೂ ಆಂಧ್ರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಜೊತೆಯಾಗಿ ಸ್ಪರ್ಧಿಸಲು ಬಿಜೆಪಿ ಹಾಗೂ ತೆಲುಗು ದೇಶಂ ಪಾರ್ಟಿಗಳು ಸಮ್ಮತಿಸಿವೆ. ನಟ ಪವನ್ ಕಲ್ಯಾಣ್ ನೇತೃತ್ವದ ಜನ ಸೇನಾ ಪಾರ್ಟಿ (ಜೆ.ಎಸ್.ಪಿ.) ಸಹ ಮೈತ್ರಿಕೂಟದ **(4ನೇ ಪುಟಕ್ಕೆ)**

## ರಾಜ್ಯದ ಬಿಜೆಪಿ ಅಭ್ಯರ್ಥಿಗಳ ಬಗ್ಗೆ ಇಂದು ಸ್ಪಷ್ಟ ಚಿತ್ರಣ

ಬೆಂಗಳೂರು, ಮಾ. 9- ಲೋಕಸಭಾ ಚುನಾವಣೆಗಾಗಿ ರಾಜ್ಯ ಬಿಜೆಪಿ ಅಭ್ಯರ್ಥಿಗಳ ಬಗ್ಗೆ ನಾಳೆ ಭಾನುವಾರ ಸಂಜೆ ಸ್ಪಷ್ಟ ಚಿತ್ರಣ ಸಿಗಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. ನಾಳೆ ನಾನು ದೆಹಲಿಗೆ ತೆರಳಲಿದ್ದೇನೆ. ಚುನಾವಣಾ ಸಮಿತಿ ಸಭೆ ನಡೆಯಲಿದ್ದು, ಅದರಲ್ಲಿ ಪ್ರಧಾನ ಮಂತ್ರಿ ಮೋದಿ ಭಾಗವಹಿಸಲಿದ್ದಾರೆ. ನಾಳೆ ಸ್ಪಷ್ಟ ಚಿತ್ರಣ ಸಿಗಲಿದೆ ಎಂದು ಯಡಿಯೂರಪ್ಪ ಹೇಳಿದ್ದಾರೆ.

## ಜಾತಿ ಗಣತಿಯಿಂದ ಶೇ.50ರ ಮೀಸಲಾತಿ ರದ್ದು



ನವದೆಹಲಿ, ಮಾ. 9 - ಜಾತಿ ಗಣತಿ ಹಾಗೂ ಆರ್ಥಿಕ ಸಮೀಕ್ಷೆಯ ಮೂಲಕ ಶೇ.50ರ ಮೀಸಲಾತಿ ಮಿತಿಯನ್ನು ಕಿತ್ತೆಸೆಯಲಾಗುವುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಜನಗಣತಿಯು ನ್ಯಾಯ ಒದಗಿಸುವತ್ತ ಮೊದಲ ಹೆಜ್ಜೆ ಎಂದು ರಾಹುಲ್ ಗಾಂಧಿ ಹೇಳಿದರು.

ಬಡವರು ಎಷ್ಟು ಜನರಿದ್ದಾರೆ? ಹಾಗೂ ಅವರ ಪರಿಸ್ಥಿತಿ ಹೇಗಿದೆ? ಈ ಬಗ್ಗೆ ಗಣತಿಯ ಅಗತ್ಯವಿದೆ ಎಂದು ರಾಹುಲ್ ಗಾಂಧಿ ತಿಳಿಸಿದ್ದಾರೆ. ಬಿಹಾರದಲ್ಲಿ ನಡೆಸಲಾದ ಜನಗಣತಿಯು ಈ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಿದೆ. ದೇಶದ ಉಳಿದ ಭಾಗದಲ್ಲಿ ಬಡವರ ಪರಿಸ್ಥಿತಿ ಹೇಗಿದೆ ಎಂಬುದರ ಚಿತ್ರಣ ಇಲ್ಲ ಎಂದೂ ರಾಹುಲ್ ಗಾಂಧಿ ಹೇಳಿದ್ದಾರೆ.

ಹೀಗಾಗಿ ನಾವು ಜಾತಿ ಗಣತಿ ಹಾಗೂ ಆರ್ಥಿಕ ಸಮೀಕ್ಷೆ ನಡೆಸಬೇಕಿದೆ. ಇದರ ಆಧಾರದ ಮೇಲೆ ಮೀಸಲಾತಿಯ ಶೇ.50ರ ಮಿತಿಯನ್ನು **(4ನೇ ಪುಟಕ್ಕೆ)**










## ನಗರದಲ್ಲಿ ಶ್ರೀ ಮಾರ್ಕಂಡೇಶ್ವರ ಸ್ವಾಮಿ ಉತ್ಸವ



ದಾವಣಗೆರೆ, ಮಾ.9- ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದಿಂದ ಶನಿವಾರ ಶ್ರೀ ಮಾರ್ಕಂಡೇಶ್ವರ ಸ್ವಾಮಿ ಉತ್ಸವವು ನಗರದ ರಾಜಬೀದಿಗಳಲ್ಲಿ ನಡೆಯಿತು. ನಂತರ ಶ್ರೀ ಪ್ರಭುಲಿಂಗ ಸ್ವಾಮೀಜಿಗಳಿಂದ ಆಶೀರ್ವಚನ, ನಂತರ ಅನ್ನ ಸಂತರ್ಪಣೆ ನಡೆಯಿತು.

## ನಗರದಲ್ಲಿ ಇಂದು ಜಿಲ್ಲಾ ಬಂಜಾರ ಭವನ ಉದ್ಘಾಟನೆ

ದಾವಣಗೆರೆ, ಮಾ. 9- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಸಹಯೋಗ ದಲ್ಲಿ ನಾಳೆ ದಿನಾಂಕ 10 ರಂದು ಬೆಳಿಗ್ಗೆ 11.30 ಕ್ಕೆ ನಗರದ ಚಿಗಟೇರಿ ಲೇಔಟ್‌ನಲ್ಲಿ ಜಿಲ್ಲಾ ಬಂಜಾರ ಭವನದ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಬಂಜಾರ ಸಮುದಾಯದ ಮುಖಂಡ ಕೆ. ರಾಘವೇಂದ್ರ ನಾಯ್ಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಬಂಜಾರ ಭವನವನ್ನು ಉದ್ಘಾಟಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಉಪ ಸಭಾಪತಿ ರುದ್ರಪ್ಪ ಲಮಾಣಿ, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಕೆ.ಎಸ್. ಬಸವಂತಪ್ಪ, ಶಿವಗಂಗಾ ವಿ. ಬಸವರಾಜ್, ಬಿ. ದೇವೇಂದ್ರಪ್ಪ, ಬಿ.ಪಿ. ಹರೀಶ್, ಡಿ.ಜಿ. ಶಾಂತನಗೌಡ, ಮೇಯರ್ ವಿನಾಯಕ ಪೈಲ್ವಾನ್ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಹಾಲೇಕಲ್ ಚಂದ್ರನಾಯ್ಕ, ಪರಮೇಶ್ ನಾಯ್ಕ, ಎಲ್. ಕೆ. ಕೊಟ್ರೇಶನಾಯ್ಕ, ರಮೇಶ್ ನಾಯ್ಕ, ಚಂದ್ರಶೇಖರನಾಯ್ಕ, ಹನುಮಂತನಾಯ್ಕ ಮುಂತಾದವರಿದ್ದರು.

## ಗಂಗನರಸಿಯಲ್ಲಿಂದು ಶಿವರಾತ್ರಿ ಅಮಾವಾಸ್ಯೆ ವಿಶೇಷ ಪೂಜೆ



ಹರಿಹರ ತಾ. ಗಂಗನರಸಿಯ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ, ಶ್ರೀ ಹನುಮಂತ ದೇವರ ಜೀರ್ಣೋದ್ಧಾರ ಸಮಿತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಮಹಾಶಿವರಾತ್ರಿ ಅಮಾವಾಸ್ಯೆ ವಿಶೇಷ ಪೂಜೆ ನಡೆಯಲಿದೆ. ಬೆಳಿಗ್ಗೆ 11 ಕ್ಕೆ ಶ್ರೀ ಗೋಣಿ ಬಸವೇಶ್ವರ, ನಾಗದೇವತಾ ಸ್ವಾಮಿಗಳಿಗೆ ವಿಶೇಷ ಪೂಜೆ, ಅಭಿಷೇಕ ನಡೆಯುವುದು. ನಂತರ 11.30 ಕ್ಕೆ ಮಹಾ ಪ್ರಸಾದ ಸೇವೆಯನ್ನು ದಾವಣಗೆರೆಯ ಶ್ರೀಮತಿ ರತ್ನಮ್ಮ ಎಸ್. ಬಸಪ್ಪ, ತಳವಾರಕೇರಿ ಮತ್ತು ಮಕ್ಕಳು ಇವರು ಏರ್ಪಡಿಸಿದ್ದಾರೆ ಎಂದು ಸಮಿತಿಯ ಅಧ್ಯಕ್ಷ ಜಿ.ಎಂ. ನಾಗೇಂದ್ರಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

### ಯಕ್ಕನಹಳ್ಳಿಯಲ್ಲಿ ಈಶ್ವರ ದೇವಸ್ಥಾನದಲ್ಲಿ ಕಳಸಾರೋಹಣ, ಕಾಳಿಕಾಂಬ ದೇವಿಯ ಪ್ರಾಣ ಪ್ರತಿಷ್ಠಾಪನೆ

# ರೈತನಿಗೆ ನೀರಿನ ಗ್ಯಾರಂಟಿ ಅವಶ್ಯ : ತರಳಬಾಳು ಜಗದ್ಗುರುಗಳು



ಹೊನ್ನಾಳಿ, ಮಾ.9- ರೈತನಿಗೆ ನೀರಿನ ಗ್ಯಾರಂಟಿಯನ್ನು ಆ ದೇವರು ಕೊಟ್ಟು ಬಿಟ್ಟರೆ ಸಾಕು. ಆತ ಬೇರೇನೂ ಕೇಳುವುದಿಲ್ಲ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮದಲ್ಲಿ ಮೊನ್ನೆ ಹಮ್ಮಿಕೊಂಡಿದ್ದ ಶ್ರೀ ಈಶ್ವರ ದೇವಸ್ಥಾನದ ಕಳಸಾರೋಹಣ, ನವಗ್ರಹ ಹಾಗೂ ಕಾಳಿಕಾಂಬ ದೇವಿಯ ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆಗೆ 850 ಕೋಟಿ ಮಂಜೂರಾಗಿದ್ದು, ಕಾಮಗಾರಿ ಬಹುಪಾಲು ಮುಕ್ತಾಯ ಹಂತಕ್ಕೆ ಬಂದ ಸಂದರ್ಭದಲ್ಲಿ ಸಾಸ್ವೇವಹಳ್ಳಿ ಮಂಜಣ್ಣ ಅವರ ಜಮೀನಿನಲ್ಲಿ ಹಾದು ಹೋಗಬೇಕಾಗಿದ್ದ ಎಂಟತ್ತು ವಿದ್ಯುತ್ ಕಂಬಗಳ ಅಳವಡಿಕೆ ಕೆಲಸ ಬಾಕಿ ಇತ್ತು. ಅದನ್ನು ಅವರು ಅಳವಡಿಸದಂತೆ ನ್ಯಾಯಾಲಯದ ಮೆಟ್ಟಿಲು ಏರಿದ್ದರಿಂದ ಕಾಮಗಾರಿ ಸ್ಥಗಿತಗೊಂಡಿತ್ತು. ಆದರೆ, ನಾವು ಹೋರಾಟ ಮಾಡಿ ಒಂದು ಹಂತಕ್ಕೆ ತಂದಿದ್ದೇವೆ. ಸಾಸ್ವೆಹಳ್ಳಿ ಮಂಜಣ್ಣ ಅವರ ಮನವೊಲಿಸಿದ್ದು, ಅವರು ಅದಕ್ಕೆ ಸಮ್ಮತಿಸಿದ್ದಾರೆ. ಶೀಘ್ರದಲ್ಲಿಯೇ ಈ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ಹೇಳಿದರು.

**ಏರೋಬಿಕ್ ರೈಸ್ ಬೆಳೆಯುವಂತೆ ಸಲಹೆ :** ನಾಡಿನಾದ್ಯಂತ ಬರಗಾಲವಿದ್ದು, ರೈತರು ಕಂಗಾಲಾಗಿದ್ದಾರೆ. ಮುಂದಿನ ದಿನಗಳಲ್ಲಿ ಏರೋಬಿಕ್ ರೈಸ್ ಬೆಳೆದರೆ ರೈತನಿಗೆ ಕೈ ತುಂಬಾ ಆದಾಯ ಸಿಗಲಿದೆ. ಈ ಭತ್ತದ ಬೆಳೆಗೆ ರೊಳ್ಳೆ ಹೊಡೆಯುವ ಅವಶ್ಯಕತೆ ಇಲ್ಲ. ವಾರಕ್ಕೊಮ್ಮೆ ಸ್ಪಿಂಕ್ಲರ್ ನಲ್ಲಿ ನೀರು ಹಾಯಿಸಬೇಕು, ಒಂದು ರೀತಿಯಲ್ಲಿ ಮೆಕ್ಕೆಜೋಳದಂತೆ ಬೆಳೆ ಬೆಳೆಯುವ ರೀತಿಯಲ್ಲಿ ಈ ಭತ್ತವನ್ನು ಬೆಳೆಯಬಹುದು. ನಾನು ಮತ್ತು ರೈತ ಸಂಘದ ಬಸವರಾಜಪ್ಪ ಅವರು ವೀಕ್ಷಣೆ ಮಾಡಿದ್ದೇವೆ. ಇದರಿಂದ ಖರ್ಚು ಕಡಿಮೆ ಎಂದು ತಿಳಿಸಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ನೀರಿನ ಮಿತ ಬಳಕೆಗೆ ನಾವೆಲ್ಲರೂ ಮುಂದಾಗಬೇಕು. ರೈತರಿಗೆ ಎಲ್ಲರೂ ಸಹಕಾರ ನೀಡಬೇಕು. ರೈತರು ಸುಖವಾಗಿದ್ದರೆ, ದೇಶ ಸಮೃದ್ಧಿಯಾಗಿರುತ್ತದೆ ಎಂದರು.

ಸೂಳೆಕೆರೆ ನೀರು ಬರಿದಾಗುತ್ತಾ ಬಂದಿದೆ. ಜಲಾಶಯಗಳಲ್ಲಿ ನೀರು ಕಡಿಮೆಯಾಗುತ್ತಿದೆ. ಆದ್ದರಿಂದ ನಾವೆಲ್ಲರೂ ಮಳೆ, ಬೆಳೆ ಚೆನ್ನಾಗಿ ಆಗಬೇಕು ಎಂದು ದೇವರಲ್ಲಿ ಪ್ರಾರ್ಥಿಸೋಣ ಎಂದು ಹೇಳಿದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ನೈತಿಕ ಮೌಲ್ಯಗಳು ಕುಸಿಯುತ್ತಿರುವ ಈ ಸಂದರ್ಭದಲ್ಲಿ ಭಗವಂತ ನಮ್ಮನ್ನು ಎಚ್ಚರಿಸುವ ಕೆಲಸ ಮಾಡುತ್ತಾನೆ. ಶ್ರೀಮಂತಿಕೆ ಬಂದಾಗ ನಾವೆಲ್ಲರೂ ಆತನನ್ನು ಮರೆಯುತ್ತೇವೆ. ಆಗ ದೇವರು ನಮ್ಮನ್ನು ಬರಗಾಲದಂತಹ ಪರೀಕ್ಷೆಗೆ ಬಿಡುತ್ತಾನೆ ಎಂದರು.

ಶಾಸಕ ಡಿ.ಜಿ. ಶಾಂತನಗೌಡ ಮಾತನಾಡಿ, ಇಡೀ ನಾಡಿಗೆ ಬರಗಾಲ ಬಂದಿದ್ದರೂ ಈ ಯಕ್ಕನಹಳ್ಳಿ ಗ್ರಾಮಕ್ಕೆ ಬರಗಾಲ ಬಂದಿಲ್ಲ ಎಂದರು. ಇದೊಂದು ಶಿಫ್ಟಿಂಗ್ ವಿಲೇಜ್ ಆಗಿದ್ದು, ಪ್ರತಿಯೊಂದು ಮನೆಗಳು 80x100 ಅಡಿಯಲ್ಲಿ ನಿರ್ಮಾಣವಾಗಿವೆ. ವಿಶಾಲವಾದ ರಸ್ತೆಗಳಿವೆ, ಭದ್ರಾ ಚಾನೆಲ್ ಹರಿಯುತ್ತಿದ್ದು, ನೀರು ಸಾಕಷ್ಟು ಲಭ್ಯವಿದೆ ಎಂದರು. ಶಾಸಕರ ಅನುದಾನದಡಿಯಲ್ಲಿ ದೇವಸ್ಥಾನ ನಿರ್ಮಾಣಕ್ಕೆ 5 ಲಕ್ಷ ಅನುದಾನ ನೀಡಿರುವುದಾಗಿ ಹೇಳಿದರು.

ಸಾಧು ವೀರಶೈವ ಸಮಾಜದ ರಾಜ್ಯಾಧ್ಯಕ್ಷ ಎಚ್.ಆರ್. ಬಸವರಾಜಪ್ಪ ಮಾತನಾಡಿ, ನೀರಿನ ಸದ್ಬಳಕೆ ಆಗದಿದ್ದರೆ ಮುಂದೆ ಒಕ್ಕಲುತನ ಮಾಡಲು ಕಷ್ಟವಾಗುತ್ತದೆ ಎಂದರು.

ಸಾಮಾನ್ಯವಾಗಿ ಈಗಿನ ಪದ್ಧತಿಯಲ್ಲಿ 1 ಕೆ.ಜಿ. ಭತ್ತ ಬೆಳೆಯಲು 5 ಸಾವಿರ ಲೀಟರ್ ನೀರು ಬೇಕಾಗುತ್ತದೆ. ಆದರೆ ಶ್ರೀ ಪದ್ಧತಿಯಡಿ ಒಂದು ಕೆ.ಜಿ. ಭತ್ತ ಬೆಳೆಯಲು ಸಾವಿರ ಲೀಟರ್ ಸಾಕು. ಆದ್ದರಿಂದ ರೈತರು ನೀರಿನ ಲಭ್ಯತೆಗನುಗುಣವಾಗಿ ಬದಲಾಗಬೇಕಾಗಿದೆ. ನೀರು, ಕರೆಂಟ್ ಸರಿಯಾಗಿ ಕೊಟ್ಟರೆ ಯಾವ ರೈತರೂ ಸಾಲ ಕೇಳುವುದಿಲ್ಲ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಅವರ ಆಪ್ತ ಸಹಾಯಕ ಸಿ.ಎಚ್. ದೇವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿ.ಪಂ. ಮಾಜಿ ಅಧ್ಯಕ್ಷೆ ದೀಪಾ ಜಗದೀಶ್ ಅಧ್ಯಕ್ಷತೆ ವಹಿಸಿದ್ದರು. ಎಸ್.ಎಂ.ನಾಗರಾಜಪ್ಪ ಮಾತನಾಡಿದರು.

ಕಾಂಗ್ರೆಸ್ ಮುಖಂಡ ಡಿ.ಎಸ್.ಪ್ರದೀಪ್ ಗೌಡ, ಕರಿಬಸಪ್ಪ, ನಿವೃತ್ತ ಯೋಧ ಶಿವಕುಮಾರ್, ಬಿಜೆಪಿ ಮುಖಂಡರಾದ ದೇವರಾಜ್ ನೆಲಹೊನ್ನೆ, ಎ.ಬಿ. ಹನುಮಂತಪ್ಪ, ಎಂ.ಪಿ.ರಾಜು, ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಎಚ್.ಎ. ಗದ್ದಿಗೇಶ್, ಟಿ. ಎಸ್.ಜಗದೀಶ್, ಹಾಲೇಶಪ್ಪ, ಕುಬೇರಪ್ಪ,ಸಿ. ಎನ್.ಮಂಜುನಾಥ್, ಎಂ.ಕರಿಬಸಪ್ಪ ಮತ್ತಿತರರು ಉಪಸ್ಥಿತರಿದ್ದರು.

## ನಗರದ ಶ್ರೀ ದಾನಮ್ಮ ದೇವಸ್ಥಾನದಲ್ಲಿ ಇಂದು ಶಿವರಾತ್ರಿ ಅಮಾವಾಸ್ಯೆ



ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಶಿವರಾತ್ರಿ ಅಮಾವಾಸ್ಯೆ ಪ್ರಯುಕ್ತ ಇಂದು ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಹೂವಿನ ಅಲಂಕಾರ ನಡೆಯುವುದು. ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ. ಬೇತೂರು ಬಸವರಾಜಪ್ಪ ಮತ್ತು ಮಕ್ಕಳು, ಬೇತೂರು ಶಕುಂತಲಮ್ಮ ಮುರುಗೇಶಪ್ಪ ಮತ್ತು ಮಕ್ಕಳು, ಶ್ರೀಮತಿ ಸೌಭಾಗ್ಯ ಜಿ.ಎಂ. ಮೋಹನ ಮತ್ತು ಮಕ್ಕಳು, ಶ್ರೀಮತಿ ವೀಣಾ ಎಸ್.ಕೆ. ರವಿ ಮತ್ತು ಮಕ್ಕಳು, ಮೊಮ್ಮಕ್ಕಳು, ದಾವಣಗೆರೆ ಇವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಶಿವರಾತ್ರಿ ಅಮವಾಸ್ಯೆ ಪೂಜೆ



ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಶಿವರಾತ್ರಿ ಅಮವಾಸ್ಯೆ ಪ್ರಯುಕ್ತ ಇಂದು ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ಉಮಾದೇವಿ ಮತ್ತು ಎ.ಡಿ. ಮಂಜಪ್ಪ (ನಿವೃತ್ತ ಕಂದಾಯ ಅಧಿಕಾರಿ, ಮಹಾನಗರ ಪಾಲಿಕೆ, ದಾವಣಗೆರೆ) ಹಾಗೂ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ಇಂದು ಶ್ರವಣ ದೋಷ ಮಕ್ಕಳಿಗೆ ಎವಿಟಿ

ದಾವಣಗೆರೆ ಪಿ.ಜೆ. ಬಡಾವಣೆಯ ಲಯನ್ಸ್ ಕ್ವೆಸ್ಟ್ ವಾಕ್ ಮತ್ತು ಶ್ರವಣ ಕೇಂದ್ರದಲ್ಲಿ ಇಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 2.30ರ ವರೆಗೆ ಶ್ರವಣ ದೋಷ ಹಾಗೂ ಶ್ರವಣಯಂತ್ರ ಉಪಯೋಗಿಸುತ್ತಿರುವ ಮಕ್ಕಳಿಗೆ ಆಡಿಟರಿ ವರ್ಬಲ್ ಥೆರಪಿ (ಎವಿಟಿ) ಕಾರ್ಯಕ್ರಮ ನಡೆಯಲಿದೆ. ಕಿವುಡುತನ, ಒಂದು ಕಿವಿ ಕೇಳಿಸುತ್ತಿರುವುದು, ಕೇಳಿಸಿಕೊಳ್ಳಲು ಕಷ್ಟವಾಗುತ್ತಿರುವುದು, ಶ್ರವಣ ನಷ್ಟ ತೀವ್ರವಾಗಿದ್ದರೆ ಶ್ರವಣೇಂದ್ರಿಯ-ಮೌಖಿಕ ಚಿಕಿತ್ಸೆಯಿಂದ ಪ್ರಯೋಜನ ಪಡೆಯಬಹುದು. ವಿವರಕ್ಕೆ ಸಂಪರ್ಕಿಸಿ : 9844131035.


### ಪೋತಲಗಟ್ಟೆ ಕಾಡಜ್ಜಿರ ಬಸವರಾಜಪ್ಪ ನಿಧನ



ಹರಪನಹಳ್ಳಿ ತಾಲ್ಲೂಕು ಪೋತಲಗಟ್ಟೆ ಗ್ರಾಮದ **ಶ್ರೀ ಕಾಡಜ್ಜಿ ಬಸವರಾಜಪ್ಪ** (78) ಅವರು ದಿನಾಂಕ 09-03-2024ರ ಶನಿವಾರ ರಾತ್ರಿ 8.05ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10-03-2024 ರ ಭಾನುವಾರ ಮಧ್ಯಾಹ್ನ 1.30ಕ್ಕೆ ಪೊತಲಗಟ್ಟೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**– ದುಃಖತಪ್ತ ಕುಟುಂಬ ವರ್ಗ**
**ಕಾಡಜ್ಜಿರ ವಂಶಸ್ಥರು, ಪೊತಲಗಟ್ಟೆ**
**ಮೊ. : 99458 40729, 80883 86710**


# ಇನ್ನೂ ಹತ್ತು ವರ್ಷ ಕಾಲ 'ಗ್ಯಾರಂಟಿ'

(1ನೇ ಪುಟದಿಂದ) ಗ್ಯಾರಂಟಿ ಯೋಜನೆಗಳನ್ನು ಸಹಿಸಲಾಗದೇ ಬಿಜೆಪಿ ಟೀಕಿಸುತ್ತಿದೆ. ಲೋಕಸಭಾ ಚುನಾವಣೆ ನಂತರ ಸರ್ಕಾರ ಬಿದ್ದು ಹೋಗಲಿದೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಆದರೆ, ಸರ್ಕಾರ ಕಲ್ಲು ಬಂಡೆಯಂತೆ ಐದು ವರ್ಷ ಇರಲಿದೆ. ನಂತರದ ಐದು ವರ್ಷವೂ ಕಾಂಗ್ರೆಸ್ ಸರ್ಕಾರವೇ ಅಧಿಕಾರಕ್ಕೆ ಬರಲಿದೆ. ಇನ್ನೂ ಹತ್ತು ವರ್ಷ ಗ್ಯಾರಂಟಿ ಯೋಜನೆಗಳು ಇರಲಿವೆ ಎಂದು ಸಚಿವ ರೆಡ್ಡಿ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಮಾಜಿ ಶಾಸಕ ಪಂಪಾಪತಿ ಅವರು ಹೋರಾಟ ನಡೆಸಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಇಲ್ಲಿ ಸ್ಥಾಪನೆಯಾಗಲು ಕಾರಣರಾಗಿದ್ದರು. ಬೇತೂರು ರಸ್ತೆಯಲ್ಲಿ ನೂತನ ಬಸ್ ನಿಲ್ದಾಣ ಸ್ಥಾಪನೆಯಾಗಲು ಅಂಬರ್ಕರ್ ಎಲ್ಲಪ್ಪ ಕುಟುಂಬದವರು ಜಾಗ ನೀಡಿ ಸಹಕರಿಸಿದ್ದಾರೆ ಎಂದು ಹೇಳಿದರು.

ಕೆ.ಎಸ್.ಆರ್.ಟಿ.ಸಿ. ನೌಕರರ ಕ್ವಾರ್ಟರ್ಸ್ ಮರು ನಿರ್ಮಿಸಬೇಕಿದೆ. ಇದಕ್ಕಾಗಿ ಅನುದಾನ ಬಿಡುಗಡೆ ಮಾಡಬೇಕು ಎಂದು ಇದೇ ಸಂದರ್ಭದಲ್ಲಿ ಮಲ್ಲಿಕಾರ್ಜುನ್ ಅವರು ಸಚಿವ ರೆಡ್ಡಿಗೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಕೆ.ಎಸ್. ಬಸವಂತಪ್ಪ, ಮಾಯಕೊಂಡದಲ್ಲಿ ಬಸ್ ನಿಲ್ದಾಣ ಸ್ಥಾಪಿಸಲು 10 ಕೋಟಿ ರೂ. ಬಿಡುಗಡೆ ಮಾಡಲು ಸಚಿವ ರೆಡ್ಡಿ ಸಮ್ಮತಿಸಿದ್ದು, ಅವರಿಗೆ ಧನ್ಯವಾದ ಸಲ್ಲಿಸುವುದಾಗಿ ಹೇಳಿದರು.

ವಿಧಾನ ಪರಿಷತ್ ಸದಸ್ಯ ಕೆ.ಅಬ್ದುಲ್ ಜಬ್ಬಾರ್ ಮಾತನಾಡಿ, ಮುಂದಿನ ದಶಕಗಳ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಬಸ್ ನಿಲ್ದಾಣ ರೂಪಿಸಲಾಗಿದೆ ಎಂದರು.

**ಬೆಳ್ಳಿ ಪದಕ ವಿತರಣೆ :** ಕೆ.ಎಸ್.ಆರ್.ಟಿ.ಸಿ.ಯಲ್ಲಿ ಚಾಲಕರಾಗಿ ಸೇವೆ ಸಲ್ಲಿಸುತ್ತಿರುವ ಕೆ.ಜಿ.ಮಂಜುನಾಥ್, ರವಿಕುಮಾರ್.ಆರ್, ಚಂದ್ರನಾಯ್ಕ, ಮೊಹಮ್ಮದ್ ಅಕ್ರಂ ಅಲಿ ಇವರು ಸತತ 7 ವರ್ಷಗಳ ಕಾಲ ಅಪರಾಧ ರಹಿತ - ಅಪಘಾತ ರಹಿತವಾದ ಚಾಲನೆ ಮಾಡಿದ್ದು ಇವರಿಗೆ ಬೆಳ್ಳಿ ಪದಕ ಮತ್ತು ನಗದು ಬಹುಮಾನ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮೇಯರ್ ಬಿ.ಹೆಚ್.ವಿನಾಯಕ್, ಕೆ. ಎಸ್.ಆರ್.ಟಿ.ಸಿ. ನಿಗಮದ ಸಿಬ್ಬಂದಿ ಮತ್ತು ಜಾಗೃತ ವಿಭಾಗದ ನಿರ್ದೇಶಕಿ ಕೆ.ನಂದಿನಿ ದೇವಿ, ಪಾಲಿಕೆ ಸದಸ್ಯರಾದ ಚಮನ್‌ಸಾಬ್, ನಾಗರಾಜ್, ಅಬ್ದುಲ್ ಲತೀಫ್, ಉದಯಕುಮಾರ್, ಗಡಿಗುಡಾಳ್ ಮಂಜುನಾಥ್, ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರೀನ್ ಭಾನು ಎಸ್.ಬಳ್ಳಾರಿ, ಸ್ಮಾರ್ಟ್‌ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್ ಕುಮಾರ್, ಎಲೆಬೇತೂರು ಗ್ರಾ.ಪಂ.ಅಧ್ಯಕ್ಷ ರೇವಣಸಿದ್ದಪ್ಪ, ಮುಖಂಡರಾದ ಹೆಚ್.ಬಿ. ಮಂಜಪ್ಪ, ಮಲ್ಲಿಕಾರ್ಜುನ್ ಮತ್ತಿತರರು ಉಪಸ್ಥಿತರಿದ್ದರು.

ಕೆ.ಎಸ್.ಆರ್.ಟಿ.ಸಿ. ವಿಭಾಗೀಯ ನಿಯಂತ್ರಕ ಶ್ರೀನಿವಾಸ್‌ಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಲ್ಲಿಕಾರ್ಜುನ ಪ್ರಾರ್ಥಿಸಿದರು. ವಿಭಾಗೀಯ ಸಂಚಾಲಕ ಡಿ. ಫಕೃದ್ದೀನ್ ಸ್ವಾಗತಿಸಿದರು. ಹೆಚ್.ಬಿ. ಮಂಜುನಾಥ್ ನಿರೂಪಿಸಿದರೆ, ಚೆಲುವೇಗೌಡ ವಂದಿಸಿದರು.

### ಕೆ.ಎಸ್.ಆರ್.ಟಿ.ಸಿ. ನಿಲ್ದಾಣದ ಶೌಚಾಲಯ ಸ್ವಚ್ಛತೆ ನಿರ್ವಹಿಸಿದ್ದೆ ಎಂದ ಶಾಸಕ ಬಸವಂತಪ್ಪ

ಶಾಸಕನಾಗುವ ಮೊದಲು 20 ವರ್ಷಗಳ ಕಾಲ ಕೆ.ಎಸ್. ಆರ್.ಟಿ.ಸಿ. ಬಸ್ ನಿಲ್ದಾಣದ ಶೌಚಾಲಯದ ಸ್ವಚ್ಛತೆ ಕಾಮಗಾರಿ ನಿರ್ವಹಿಸಿದ್ದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ನೆನಪಿಸಿಕೊಂಡರು. ಒಂದು ರೀತಿಯಲ್ಲಿ ಕೆ.ಎಸ್.ಆರ್.ಟಿ.ಸಿ.ಯ ಋಣ ನನ್ನ ಮೇಲಿದೆ. ಇಲ್ಲಿನ ಹಲವಾರು ಸಿಬ್ಬಂದಿಗೆ ನನ್ನ ಪರಿಚಯವೂ ಇದೆ ಎಂದವರು ಹೇಳಿದರು.

ಅಂದು ಶೌಚಾಲಯ ಸ್ವಚ್ಛತೆ ಕಾಮಗಾರಿ ನಿರ್ವಹಿಸಿದವನು ಇಂದು ಕೆ.ಎಸ್.ಆರ್.ಟಿ.ಸಿ. ಉದ್ಘಾಟನಾ ಸಮಾರಂಭಕ್ಕೆ ಬಂದಿದ್ದೇನೆ. ಇದಕ್ಕೆ ಮಾಯಕೊಂಡ ಕ್ಷೇತ್ರದ ಜನತೆ ಹಾಗೂ ಕಾಂಗ್ರೆಸ್ ಪಕ್ಷ ಕಾರಣ ಎಂದೂ ಅವರು ತಿಳಿಸಿದರು.

### ಲೋಕಸಭಾ ಮತದಿಂದ ಗ್ಯಾರಂಟಿ ಧನ್ಯವಾದ

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಮತದಾರರು ಅದರಲ್ಲೂ ಮಹಿಳಾ ಮತದಾರರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚಿನ ಮತ ನೀಡುವ ಮೂಲಕ ಧನ್ಯವಾದ ಸಲ್ಲಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಕರೆ ನೀಡಿದರು.

### ಖಾಸಗಿ ಬಸ್ ನಿಲ್ದಾಣದ ಯೋಜನೆ ಹಾಳು ಮಾಡಿದ್ದು ಲೂಟಿಗೋ?

ನಾನು ಈ ಹಿಂದಿನ ಅವಧಿಯಲ್ಲಿ ಸಚಿವನಾಗಿದ್ದ ಸಂದರ್ಭದಲ್ಲಿ ಖಾಸಗಿ ಬಸ್ ನಿಲ್ದಾಣಕ್ಕಾಗಿ ಒಳ್ಳೆಯ ಯೋಜನೆ ರೂಪಿಸಿದ್ದೆ. ಆದರೆ, ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಈ ಯೋಜನೆಯನ್ನು ಹಾಳು ಮಾಡಿತು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತರಾಟೆಗೆ ತೆಗೆದುಕೊಂಡರು.

ಈ ಯೋಜನೆ ಹಾಳು ಮಾಡಿದ್ದು ಕಮೀಷನ್‌ಗೋ ಅಥವಾ ಲೂಟಿಗೋ ಎಂಬುದು ದೇವರಿಗೇ ಗೊತ್ತು. ಆರು ತಿಂಗಳ ಹಿಂದೆ ತರಾತುರಿಯಲ್ಲಿ ಈ ಬಸ್ ನಿಲ್ದಾಣವನ್ನು ಉದ್ಘಾಟಿಸಲಾಯಿತು ಎಂದೂ ಅವರು ಟೀಕಿಸಿದರು. ಈಗ ಬಸ್ ನಿಲ್ದಾಣವನ್ನು ಬದಲಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಬೇರೆ ಯಾವುದಾದರೂ ಅನುದಾನ ತಂದು ಇನ್ನಷ್ಟು ಸರಿಪಡಿಸಲಾಗುವುದು. ಆದಷ್ಟು ಶೀಘ್ರ ಈ ಬಸ್ ನಿಲ್ದಾಣವೂ ಉದ್ಘಾಟನೆಯಾಗಲಿದೆ ಎಂದವರು ತಿಳಿಸಿದರು.

# 2-3 ದಿನಗಳಲ್ಲಿ ಬಿಜೆಪಿ ಪಟ್ಟಿ



ಬೆಂಗಳೂರು, ಮಾ. 9 - ಲೋಕಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಪಟ್ಟಿ ಎರಡು-ಮೂರು ದಿನಗಳಲ್ಲಿ ಬಿಡುಗಡೆ ಯಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಅಭ್ಯರ್ಥಿಗಳ ಆಯ್ಕೆ ಸಂಬಂಧ ಪಕ್ಷದ ವರಿಷ್ಠರು ರಾಜ್ಯದ ಮುಖಂಡರೊಂದಿಗೆ ಎರಡು ಸುತ್ತಿನ ಮಾತುಕತೆ ಮುಗಿಸಿದ್ದಾರೆ. ಚರ್ಚೆ ಸಂದರ್ಭದಲ್ಲಿ ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾತುಕತೆ ನಡೆಸಿ, ಸಂಭವನೀಯ ಅಭ್ಯರ್ಥಿಗಳ ಪಟ್ಟಿ ನೀಡಿದ್ದೇವೆ ಎಂದರು.


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶೇ.50 ರಷ್ಟು ಕ್ಷೇತ್ರಗಳಿಗೆ ಮೊದಲ ಹಂತದಲ್ಲಿಯೇ ಅಭ್ಯರ್ಥಿಗಳ ಪಟ್ಟಿ ಹೊರ ಬೀಳಲಿದೆ. ರಾಜ್ಯ ನಾಯಕರಿಂದ ಮಾಹಿತಿ ಪಡೆದಿರುವ ವರಿಷ್ಠರು ಕೆಲವು ಮಾನದಂಡ ಗಳನ್ನು ಆಧಾರ ವಾಗಿಟ್ಟುಕೊಂಡು ಹಾಗೂ ಚುನಾವಣಾ ಪೂರ್ವ ಸಮೀಕ್ಷೆ ವರದಿ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದ್ದಾರೆ ಎಂದು ಹೇಳಿದರು.

ಈ ಬಾರಿ 28 ಕ್ಷೇತ್ರಗಳಲ್ಲೂ ಗೆಲ್ಲಬೇಕೆಂಬ ಗುರಿ ನಮ್ಮದಾಗಿದೆ. ಹಾಗಾಗಿ ವರಿಷ್ಠರು ಹಲವು ಸುತ್ತಿನ ಕಸರತ್ತಿನ ನಂತರ ಗೆಲುವಿನ ರೂವಾರಿಗಳ ಹೆಸರನ್ನು ಪ್ರಕಟಿಸಲಿದ್ದಾರೆ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಹೊಸ ಇತಿಹಾಸ ಸೃಷ್ಟಿ ಸುವ ವಿಶ್ವಾಸವಿದೆ. ಹಿಂದಿಗಿಂತ ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿದ್ದೇವೆ ಎಂದು ಹೇಳಿದರು.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಮಠದಲ್ಲಿ ಅಮವಾಸ್ಯೆ

ದಾವಣಗೆರೆ ಸಮೀಪದ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ, ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಮಹಾಶಿವರಾತ್ರಿ ಅಮವಾಸ್ಯೆ ಪ್ರಯಕ್ತ ಇಂದು ಬೆಳಿಗ್ಗೆ 7 ರಿಂದ 9 ರವರಗೆ ಅಭಿಷೇಕ ವಿಶೇಷ ಪೂಜೆ ನಡೆಯಲಿದೆ. ಚಿ|| ಈಶಾನ್ ಗುಪ್ತ, ಮಾನಸ, ಅಶಿಷ್ ಕುಮಾರ್, ಲಂಡನ್ ವಾಸ ಮತ್ತು ಶ್ರೀ ದೇವಿ ಶೆಟ್ರು ಶಿವಮೂರ್ತಪ್ಪ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

## ಮಾವಿನಹೊಳೆಯಲ್ಲಿಂದು



ಚನ್ನಗಿರಿ ತಾಲ್ಲೂಕಿನ ಸುಪ್ರಸಿದ್ಧ ಸುಕ್ಷೇತ್ರ ಮಾವಿನ ಹೊಳೆ ಶ್ರೀ ಗುರುಮಹಾರುದ್ರ ಸ್ವಾಮಿ ಮಹಾಶಿವರಾತ್ರಿ ಕಾರ್ಯಕ್ರಮದ ಪ್ರಯುಕ್ತ ಇಂದು ಬೆಳಿಗ್ಗೆ 11.30ಕ್ಕೆ ಶ್ರೀ ಭದ್ರಕಾಳಿ ಅಮ್ಮನವರ ಜಾತ್ರೆ ಹಾಗೂ ಪ್ರಸಾದ ವಿನಿಯೋಗ ಕಾರ್ಯಕ್ರಮವಿದೆ.


## ರಾಮಲಿಂಗೇಶ್ವರ ಮಠದಲ್ಲಿ ಇಂದು ಹೋಮ

ಚನ್ನಗಿರಿ ತಾ. ತ್ಯಾವಣಿಗೆ ಸಮೀಪದ ಹರನಹಳ್ಳಿ - ಕೆಂಗಾಪುರ ಶ್ರೀ ರಾಮಲಿಂಗೇಶ್ವರ ಮಠದಲ್ಲಿ ಇಂದು ಬೆಳಿಗ್ಗೆ 8 ಗಂಟೆಗೆ ಶ್ರೀಗಳ ಆಶೀರ್ವಚನ, 9 ಗಂಟೆಗೆ ಅಮಾವಾಸ್ಯೆ ಪ್ರಯುಕ್ತ ಅಗ್ನಿಹೋಮ ನಡೆಯಲಿದೆ.

## ಹಳೇ ಕುಂದವಾಡದಲ್ಲಿ ಇಂದು ಹೋಮ

ಶ್ರೀ ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ಇಂದು ಬೆಳಿಗ್ಗೆ 7.30 ಕ್ಕೆ ಗುಗ್ಗಳ ಕಾರ್ಯಕ್ರಮ ದಲ್ಲಿ ಶ್ರೀ ಓಂಕಾರ ಶಿವಾ ಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ನಾಳೆ ದಿನಾಂಕ 11 ರಿಂದ 14 ರವರೆಗೆ ವಿಶೇಷ ಪೂಜೆ ನಡೆಯಲಿದ್ದು, ದಿನಾಂಕ 15 ಮತ್ತು 16 ರಂದು ಜಗತ್ ಕಲ್ಯಾಣಕ್ಕಾಗಿ ಮಹಾಧ ನ್ವಂತರಿ, ಮಹಾಸುದರ್ಶನ, ಶತ್ರುಬಾಧೆ ನಿವಾರಣಾ ಹೋಮ, ಸರ್ವಸಿದ್ಧಿ, ಕಳಾಭಿವೃದ್ಧಿ, ಪಂಚರುದ್ರ ಹೋಮಗಳನ್ನು ಹಮ್ಮಿಕೊಳ್ಳಲಾಗಿದೆ.


### 29 ನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಕೆ.ಎಂ.ಕಡ್ಲಯ್ಯ
ನಿವೃತ್ತ ಬಿಲ್ ಕಲೆಕ್ಟರ್, ನಗರಸಭೆ

**ನೀವು ನಮ್ಮನ್ನಗಲಿ**
**ಇಂದಿಗೆ 29 ವರ್ಷಗಳು ಗತಿಸಿದವು.**
**ಸದಾ ತಮ್ಮ ಸ್ಮರಣೆಯಲ್ಲಿರುವ**

ಪತ್ನಿ : ದಿ|| ಶ್ರೀಮತಿ ಪಾರ್ವತಮ್ಮ
ಮಕ್ಕಳಾದ : ಟಿ.ಎಂ.ರುದ್ರಯ್ಯ, ASI (Rtd.), ದಾವಣಗೆರೆ
ಟಿ.ಎಂ.ಸಿದ್ದಲಿಂಗಯ್ಯ
ಟಿ.ಎಂ.ಗಣೇಶಯ್ಯ, ಟಿ.ಎಂ. ನಾಗರಾಜಯ್ಯ
ಟಿ.ಎಂ.ಶಿವಯೋಗಿಸ್ವಾಮಿ, ಟಿ.ಎಂ.ಮಂಜುನಾಥಯ್ಯ
ಜಯಮ್ಮ, ಶಶಿಕಲಾ ಹೆಚ್.ಎಂ.ರುದ್ರೇಶ್
ಚಂದ್ರಕಲಾ ಶ್ರೀಧರಸ್ವಾಮಿ
ಸೊಸೆಯಂದಿರಾದ :
ಶ್ರೀಮತಿ ಕಮಲ, ಪೂರ್ಣಿಮ, ಲಲಿತ, ವಿಮಲಾಕ್ಷಿ, ರೇಖಾ

ಮೊಮ್ಮಕ್ಕಳಾದ : **ಶ್ರೀಮತಿ ಗೀತಾರಾಣಿ, ಮಂಜುನಾಥ್ ಆರ್.ಎಂ., ಶ್ರೀಮತಿ ಸ್ವಾತಿ, ಶ್ರೀ ವಿಶ್ವಾಸ್, ತಿಪ್ಪೇಶ್, ವಾಗೀಶ್, ಕಾರ್ತಿಕ್, ನಿಖಿಲ್, ಕೃತಿಕ, ಶಿವಶಂಕರ್, ಕಿರಣ್, ರವಿಶಂಕರ್, ಯಶಸ್ ಮತ್ತು** ಮರಿಮೊಮ್ಮಕ್ಕಳು: **ಅಮಯ್, ಅವನಿ, ಸ್ವಯಂ ಹಾಗೂ ಸಿಬ್ಬಂದಿ ವರ್ಗ, ಸ್ವಾತಿ ಇಂಡಸ್ಟ್ರೀಸ್**, ದಾವಣಗೆರೆ.



### ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ದಿನಾಂಕ 27.02.2024ನೇ ಮಂಗಳವಾರದಂದು ನಮ್ಮ ಸಹೋದರ
**ಶ್ರೀ ನಾಗರಾಜ ಎಸ್. ದೇಶಪಾಂಡೆ**
ಅವರು ಸ್ವರ್ಗಸ್ಥರಾಗಿದ್ದು, ಮೃತರ ಆತ್ಮಶಾಂತಿಗಾಗಿ
**'ವೈಕುಂಠ ಸಮಾರಾಧನೆ'**ಯನ್ನು
ದಿನಾಂಕ 11.03.2024ನೇ ಸೋಮವಾರ ಬೆಳಿಗ್ಗೆ ಹಮ್ಮಿಕೊಳ್ಳಲಾಗಿದೆ.
**ಸ್ಥಳ : ಶ್ರೀ ಸದ್ಗುರು ಕೃಪಾ ಭವನ, ದೇವರಹಟ್ಟಿ, ದಾವಣಗೆರೆ**
**ದುಃಖತಪ್ತರು : ಪತ್ನಿ, ಮಕ್ಕಳು**
**ಸಹೋದರರು, ಸಹೋದರಿ**
**ಅಪಾರ ಬಂಧು-ಬಳಗದವರು ಹಾಗೂ ಭಕ್ತ ಸಮೂಹದವರು.**


## ಧರಣಿ ಸತ್ಯಾಗ್ರಹದ ಸ್ಥಳಕ್ಕೆ ಭೇಟಿ ನೀಡಿದ ಕಾಗಿನೆಲೆ ಶ್ರೀ




ಮಲೇಬೆನ್ನೂರು ಮಾ.9- ಭಾನುವಳ್ಳಿ ಗ್ರಾಮದಲ್ಲಿ ಜಿಲ್ಲಾಡಳಿತದಿಂದ ತೆರವು ಗೊಳಿಸಿರುವ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಪುನರ್ ಪ್ರತಿಷ್ಠಾಪಿಸಬೇಕು ಮತ್ತು ಅನಧಿಕೃತವಾಗಿ ನಿರ್ಮಿಸಿರುವ ಮದಕರಿ ನಾಯಕ ಮಹಾದ್ವಾರ ಹಾಗೂ ವಾಲ್ಮೀಕಿ ವೃತ್ತದ ನಾಮಫಲಕವನ್ನು ತೆರವುಗೊಳಿಸುವಂತೆ ಒತ್ತಾಯಿಸಿ, ಕುರುಬ ಸಮಾಜದವರು ನಡೆಸುತ್ತಿರುವ ಧರಣಿ ಸತ್ಯಾಗ್ರಹ ಸ್ಥಳಕ್ಕೆ ಶನಿವಾರ ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಭೇಟಿ ನೀಡಿ ಆತ್ಮಸ್ಥೈರ್ಯ ತುಂಬಿದರು.

ಸೋಮವಾರದ ವೇಳೆಗೆ ಗ್ರಾಮದಲ್ಲಿ ಉಂಟಾಗಿರುವ ಪ್ರತಿಮೆ ವಿವಾಹ ಸಮಸ್ಯೆ ಬಗೆಹರಿಯುವ ವಿಶ್ವಾಸವಿದ್ದು, ಕಾನೂನನ್ನು ಯಾರೂ ಕೈಗೆ ತೆಗೆದುಕೊಳ್ಳದೇ ಶಾಂತಿಯುತವಾಗಿ ಹೋರಾಟ ಮಾಡುವಂತೆ ಧರಣಿ ನಿರತರಿಗೆ ಸ್ವಾಮೀಜಿ ಹೇಳಿದರು.

ಒಂದು ವೇಳೆ ಸಮಸ್ಯೆಯನ್ನು ಬಗೆಹರಿಸದಿದ್ದರೆ ನಿಮ್ಮ ಬೆನ್ನೆಲುಬಾಗಿ ನಾವು ಇರುತ್ತೇವೆ ಎಂದು ಸ್ವಾಮೀಜಿ ಭಕ್ತರಿಗೆ ಧೈರ್ಯ ಹೇಳಿದರು.

ಗ್ರಾಮದಲ್ಲಿ ಶುಕ್ರವಾರ ತೆರವು ಮಾಡಿ ಬೀರ ಲಿಂಗೇಶ್ವರ ದೇವಸ್ಥಾನದಲ್ಲಿ ಇಟ್ಟಿದ್ದ ಕುರುಬ ಸಮಾಜದ ನಾಮಫಲಕಗಳನ್ನು ಸ್ವಾಮೀಜಿ ವಿಕ್ಷೀಷಿಸಿದರು.

ಸಮಾಜದ ಮುಖಂಡರಾದ ಹೆಚ್.ಎಸ್.ಕರಿಯಪ್ಪ, ಹೆಚ್.ಕೆ.ಕನ್ನಪ್ಪ, ಯು.ಕೆ.ಅಣ್ಣಪ್ಪ, ಹೇಮಂತ್, ಪವಾಡಿ ಮಂಜಪ್ಪ, ಗ್ರಾ.ಪಂ. ಸದಸ್ಯೆ ರೇಣುಕಮ್ಮ ಸೇರಿದಂತೆ ನೂರಾರು ಜನ ಈ ವೇಳೆ ಹಾಜರಿದ್ದರು.

ಡಿವೈಎಸ್ಪಿ ಸಂತೋಷ್ ಸಿದ್ದನಗೌಡ, ಸಿಪಿಐ ಸುರೇಶ್ ಸಗರಿ, ಪಿಎಸ್ಐ ಪ್ರಭು ಕೆಳಗಿನಮನೆ ಅವರು ಶ್ರೀಗಳಿಗೆ ಸಮಸ್ಯೆ ಬಗ್ಗೆ ವಿವರಿಸಿದರು.

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas




**ದಿನಾಂಕ : 10.03.2024 ರಿಂದ 16.03.2024ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಆದಾಯದ ಮೂಲದಲ್ಲಿ ಹೆಚ್ಚಳ, ಆದರೆ ಅದು ನಿಮ್ಮ ಕೈ ಸೇರಲು ತುಸು ತಡವಾಗಬಹುದಷ್ಟೇ, ತಾಳ್ಮೆಯಿರಲಿ. ಮಕ್ಕಳ ಮಿತಿಮೀರುತ್ತಿರುವ ಖರ್ಚು-ವೆಚ್ಚಗಳು ನಿಮ್ಮನ್ನು ಕಂಗೆಡಿಸಲಿದೆ. ಮನಸ್ಸು ಅಧ್ಯಾತ್ಮದ ಕಡೆ ತಿರುಗಲಿದ್ದು, ಸಂಬಂಧಪಟ್ಟ ವಿದ್ವಾಂಸರನ್ನು ಭೇಟಿಯಾಗುವಿರಿ, ಹಿರಿಯರು ಮಾಡಲಿರುವ ನೆರವನ್ನು ನಿಸ್ಸಂಕೋಚವಾಗಿ ತೆಗೆದುಕೊಳ್ಳಿ. ವಿದ್ಯಾರ್ಥಿಗಳಿಗೆ ಫಲಿತಾಂಶವು ನಿರೀಕ್ಷೆಗೆ ವಿರುದ್ಧವಾಗಿ ಬರಬಹುದು. ಸ್ನೇಹಿತರ ವೈಯಕ್ತಿಕ ವಿಚಾರದಲ್ಲಿ ಪ್ರವೇಶ ಬೇಡ, ಗುರುಗಳ ಸೇವೆ ಮಾಡಿ. ಮಂಗಳ-ಬುಧ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಪ್ರಾರಂಭಿಸಲಿರುವ ಯಾವುದೇ ಯೋಜನೆಗಳಿರಲಿ ದೃಢ ನಿರ್ಧಾರದೊಂದಿಗೆ ಆರಂಭಿಸಿ. ನಿರೀಕ್ಷೆ ಮಟ್ಟದಲ್ಲಿರುವ ಆದಾಯ ನಿಮ್ಮಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಲಿದೆ. ವೈಯಕ್ತಿಕ ಕೆಲಸಗಳಿಗೆ ಬಂಧುಗಳಿಂದಲೇ ವಿರೋಧ ಬರಬಹುದು, ಅದನ್ನು ಅಲಕ್ಷಿಸುವುದು ಮೇಲು, ಕೃಷಿ ಕಾರ್ಯದಲ್ಲಿ ವಿಶೇಷ ಆಸಕ್ತಿ ಮೂಡಲಿದೆ, ಶಸ್ತ್ರಚಿಕಿತ್ಸಾ ಪರಿಣಿತರಿಗೆ ವಿದೇಶದಲ್ಲಿ ಬೇಡಿಕೆ, ಬರಬೇಕಾಗಿರುವ ಬಾಕಿ ಹಣದ ಬಗ್ಗೆ ಉದಾಸೀನ ಸಲ್ಲದು, ಅವಿವಾಹಿತರಿಗೆ ಕಂಕಣಭಾಗ್ಯ, ಮನೆಯಲ್ಲೇ ಭಿನ್ನಾಭಿಪ್ರಾಯ ಮೂಡಿ ರದ್ದಾಗಲಿದೆ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಚ.ಕೆ.ಕೋ.ಹ.)**

ಜನರನ್ನು ಮಾತಿನ ಮೋಡಿಯಿಂದಲೇ ಅವರನ್ನು ವಶಪಡಿಸಿಕೊಳ್ಳುವ ಕಲೆ ನಿಮಗೀಗಾಲೇ ಕರಗತವಾಗಿದೆ. ಆದರೆ ಇದರಿಂದಾಗುವ ಪ್ರಯೋಜನ ಮಾತ್ರ ತಾತ್ಕಾಲಿಕ ಎಂಬುದನ್ನು ಮರೆಯಬೇಡಿ, ಸೋದರಿಯ ಗಂಡನಿಗೆ ಹೃದಯ ಸಂಬಂಧಿ ಆರೋಗ್ಯ ಸಮಸ್ಯೆ ಕಾಡಲಿದ್ದು, ನೆರವಿಗೆ ಧಾವಿಸುವಿರಿ. ಆದಾಯ ಮಂದಗತಿಯಲ್ಲಿರುವುದರಿಂದ ಹೆಚ್ಚಿನ ವೆಚ್ಚಗಳಿಗೆ ಕೈಹಾಕಬೇಡಿ, ಆಗಬೇಕಾಗಿರುವ ಕೆಲಸಗಳಿಗೆ ಮೇಲಾಧಿಕಾರಿಗಳಿಂದ ಒತ್ತಡ ಬರಲಿದೆ, ಆಸ್ತಿಕೊಳ್ಳುವ ಅಥವಾ ಮಾರುವ ವಿಚಾರದಲ್ಲಿ ಅವಸರಬೇಡ, ಸ್ನೇಹಿತರ ಸಲಹೆ ಪಡೆಯಿರಿ. ಭಾನು-ಸೋಮ-ಬುಧ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಆಸ್ತಿ ವಿಭಾಗದ ವಿಚಾರದಲ್ಲಿ ಅವಸರದ ನಿರ್ಧಾರಗಳು ನಷ್ಟಕ್ಕೆ ಕಾರಣವಾಗಬಹುದು.ಮಕ್ಕಳ ನಡಾವಳಿಯಲ್ಲಿ ಕಂಡುಬರುವ ವ್ಯತ್ಯಾಸ ನಿಮಗೇ ಆಶ್ಚರ್ಯವನ್ನುಂಟು ಮಾಡಲಿದೆ. ಯುವಕರು ತಮ್ಮ ಆಲಸ್ಯವನ್ನು ಬದಿಗಿಟ್ಟು, ಕೆಲಸ-ಕಾರ್ಯಗಳಲ್ಲಿ ತೊಡಗಿಕೊಳ್ಳುವುದು ಮೇಲು. ಸರ್ಕಾರದಿಂದ ಬರಬೇಕಾಗಿರುವ ನೆರವನ್ನೇ ನಂಬಿಕೊಂಡು ಸಾಲಮಾಡಲು ಹೋಗಬೇಡಿ. ಕೆಲವು ವಿಷಯಗಳಲ್ಲಿ ನಿಮ್ಮ ಮೌನವನ್ನು ಜನರು ಅಪಾರ್ಥ ಮಾಡಿ ಕೊಳ್ಳುವರು, ನವದಂಪತಿಗಳ ಸಂಸಾರದಲ್ಲಿ ತುಸು ಇರುಸು-ಮುರುಸು ಕಂಡುಬರಲಿದೆ. ಮಹಿಳೆಯರಿಗೆ ಉತ್ತಮ ದಿನಗಳು. ಸೋಮ-ಬುಧ-ಗುರು-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಮನಸ್ಸಿನಲ್ಲಿ ಹಲವಾರು ದ್ವಂದ್ವಗಳನಿಟ್ಟುಕೊಂಡು ಕೆಲಸ ಕಾರ್ಯಗಳಲ್ಲಿ ತೊಡಗಬೇಡಿ, ಇದರಿಂದ ನಿಮ್ಮ ಪ್ರಗತಿಗೆ ತೊಡಕಾಗಬಹುದು, ಹಿರಿಯರಾಡುವ ಕೆಲವು ಮಾತುಗಳನ್ನು ನಗಣ್ಯಮಾಡುವುದು ಉತ್ತಮ ಸರ್ಕಾರಿ ನೌಕರರು ತಮ್ಮ ಮೇಲಾಧಿಕಾರಿಗಳ ಮನ ಗೆಲ್ಲಲು ಹರಸಾಹಸ ಪಡುವರು. ಎಲ್ಲರನ್ನೂ ಎಲ್ಲಾ ರೀತಿಯಿಂದ ಮೆಚ್ಚಿಸಲು ಸಾಧ್ಯವಿಲ್ಲ ಎಂಬುದು ನೆನಪಿರಲಿ. ನಿಮ್ಮ ನಡಾವಳಿ ಆದಾಯದ ಮೇಲೆ ಅಡ್ಡಪರಿಣಾಮ ಬೀರಲಿದೆ, ಇದನ್ನು ಗಂಭೀರವಾಗಿ ಪರಿಗಣಿಸುವುದು ಉತ್ತಮ. ಸಂಗಾತಿಯ ನೆರವು ಸಿಗಲಿದೆ, ಗೋ ಸೇವೆ ಮಾಡಿ. ಭಾನು-ಮಂಗಳ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಮನುಷ್ಯನ ಯಾವುದೇ ಕಾರ್ಯಕ್ಕಾಗಲೀ ಅವನ ಪ್ರಯತ್ನ ಹಾಗೂ ದೈವ ಸಹಾಯ ಎರಡೂ ಅತಿಮುಖ್ಯ. ಮಂಗಳ ಕಾರ್ಯ ಸುಸೂತ್ರವಾಗಿ ನೆರವೇರಿದ ನೆಮ್ಮದಿ ಕಾಣುವಿರಿ, ಸ್ಥಿರ ಆಸ್ತಿಕೊಳ್ಳುವ ವಿಚಾರವನ್ನು ಈಗ ಪ್ರಸ್ತಾಪಿಸಬಹುದು. ಹಣಕಾಸಿನ ಹರಿವು ನಿಮ್ಮ ನಿರೀಕ್ಷೆ ಮಟ್ಟದ ಸಮೀಪಕ್ಕೆ ಬರಲಿದೆ, ವಿದ್ಯಾರ್ಥಿಗಳು ತಮ್ಮ ಉನ್ನತಾಧ್ಯಯನಕ್ಕೆ ಹೆಚ್ಚಿನ ಶ್ರಮಪಡದೆ ಅನ್ಯಮಾರ್ಗವಿಲ್ಲ. ಯಾವುದಕ್ಕೂ ಕೊಡಿಟ್ಟ ಹಣ ಮತ್ತಿನ್ಯಾವುದಕ್ಕೋ ಖರ್ಚಾಗುವ ಸಂಭವವಿದೆ ಸಾಧು-ಸಂತರ ದರ್ಶನವಾಗಲಿದೆ. ಬುಧ-ಗುರು-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಅವರಿವರ ಮಾತನ್ನು ಕಟ್ಟಿಕೊಂಡು ನಷ್ಟದ ದಾರಿಯನ್ನು ತುಳಿದ ನೀವು ಈಗ ದೈವದ ಮೊರೆ ಹೋಗುವಿರಿ, ನಿಮ್ಮ ಈ ಶರಣಾಗತಿ ಬೇರೆಯವರಿಗೆ ನಾಟಕದಂತೆ ಕಾಣಲಿದೆ. ರಾಜಕಾರಣಿಗಳು ತಮ್ಮ ಅಸ್ತಿತ್ವಕ್ಕಾಗಿ ಪಕ್ಷದ ವರಿಷ್ಠ ಮೊರೆ ಹೋಗುವರು ಮತ್ತು ಜನ ಬೆಂಬಲ ಪಡೆಯಲು ಹರ ಸಾಹಸ ಪಡುವರು. ವಿದೇಶದಲ್ಲಿರುವ ಮಗನು ಸ್ವದೇಶದಲ್ಲಿ ಆಸ್ತಿಕೊಳ್ಳಲು ಹಣಕಾಸು ಒಟ್ಟು ಮಾಡುವನು. ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅಧಿಕ ವೆಚ್ಚ ಅನಿವಾರ್ಯವಾಗಲಿದೆ ಶೇರುಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಹುಚ್ಚಾಟಕ್ಕೆ ಹೋಗಬೇಡಿ, ಗುರುಗಳ ಸೇವೆ ಮಾಡಿ. ಬುಧ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಆರಂಭದ ದಿನಗಳಲ್ಲಿ ಎಲ್ಲವೂ ಚೆನ್ನ ಎಂಬಂತೆ ಕಂಡುಬಂದರೂ ಕ್ರಮೇಣ ತುಸು ವ್ಯತ್ಯಾಸ ಕಾಣಲು ಆರಂಭವಾಗಲಿದೆ, ಕೆಲವು ಕೌಟುಂಬಿಕ ವಿಚಾರಗಳಲ್ಲಿ ಹೆಚ್ಚಿನ ತಾಳ್ಮೆಯಿಂದ ವರ್ತಿಸುವುದು ಮೇಲು. ಪ್ರಾಪ್ತ ವಯಸ್ಕರಾದ ಮಕ್ಕಳನ್ನು ಅನುಭವಕ್ಕಾಗಿ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವುದು ಮೇಲು, ಆಸ್ತಿ ವಿಚಾರದಲ್ಲಿ ದುಡುಕಿನ ನಿರ್ಧಾರ ಬೇಡ. ಅನಿರೀಕ್ಷಿತ ಪ್ರಸಂಗವೊಂದ ರಿಂದಾಗಿ ನಿಮಗೆ ನಿಭಾಯಿಸಲಾಗದ ಜವಾಬ್ದಾರಿಯೊಂದು ಹೆಗಲೇರಲಿದೆ, ನಿಮ್ಮ ಚಟುವಟಿಕೆಗಳಿಗೆ ಮಹಿಳೆಯರಿಂದ ಅಡ್ಡಿಯುಂಟಾಗಲಿದೆ ಎಚ್ಚರದಿಂದಿರಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಢ.ಬೆ.)**

ಹೇಳಬೇಕಾದ ವಿಷಯವನ್ನು ಬಹಳ ಸ್ಪಷ್ಟವಾಗಿ ಹಾಗೂ ಖಚಿತವಾಗಿ ತಿಳಿಸಿರಿ. ಇದರಿಂದ ಇತರರಿಗೆ ಗೊಂದಲವಾಗುವುದು ತಪ್ಪುತ್ತದೆ. ವೃತ್ತಿಯಲ್ಲಿ ಗಾಂಭೀರ್ಯವನ್ನು ಕಾಪಾಡಿಕೊಳ್ಳುವುದರಿಂದ ಸಾಮಾಜಿಕ ಗೌರವ ಸಲ್ಲುವುದು ಯಶಸ್ಸಿನ ಶಿಖರದಲ್ಲಿರುವ ನಿಮ್ಮನ್ನು ನೋಡಿ ಬಂಧುಗಳು ಮಾತ್ಸರ್ಯಪಡುವರು. ಕುಂಠಿತಗೊಂಡಿದ್ದ ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡುಬರಲಿದೆ, ಆದಾಯದ ಮೂಲದಲ್ಲಿ ಕಡಿತ ಕಂಡುಬರಲಿದ್ದು, ಖರ್ಚು-ವೆಚ್ಚಗಳ ಮೇಲೆ ಹಿಡಿತ ಸಾಧಿಸುವುದು ಉತ್ತಮ. ವಿದ್ಯಾರ್ಥಿಗಳ ಯಶಸ್ಸು ಮುಂದುವರೆಯಲಿದೆ. ಭಾನು-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ನಿಮ್ಮ ಆದಾಯದ ಚೇತರಿಕೆ ಎಷ್ಟಿದೆಯೆಂದರೆ ಅದು ಅಗತ್ಯಕ್ಕಿಂತ ಹೆಚ್ಚಾಗಲಿದೆ. ಆದ್ದರಿಂದ ಮಕ್ಕಳ ಭವಿಷ್ಯದ ಬಗ್ಗೆ ಯೋಚಿಸಿ, ಉಳಿತಾಯ ಮಾಡುವುದು ಮೇಲು ಬಂಧುಗಳು ನಿಮ್ಮ ನಡೆಯನ್ನು ನುಡಿಯನ್ನು ಅರಿಯಲಾಗದೇ ಚಡಪಡಿಸುವರು, ಕೈತಪ್ಪಿ ಹೋಗಿದ್ದ ಬಾಕಿ ಹಣ ಇಷ್ಟರಲ್ಲೇ ನಿಮ್ಮ ಕೈ ಸೇರಲಿದೆ. ಭೂ ಮಾರಾಟದಿಂದ ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು, ಕುಟುಂಬ ಸೌಖ್ಯ ಹೆಚ್ಚಲಿದೆ. ಹಿರಿಯರ ಆರೋಗ್ಯ ನಿಮಿತ್ತವಾಗಿ ಹೆಚ್ಚಿನ ವೈದ್ಯಕೀಯ ವೆಚ್ಚವನ್ನು ಭರಿಸಬೇಕಾದೀತು. ವಿಷ್ಣು ಸಹಸ್ರನಾಮ ಪಠಿಸಿ. ಸೋಮ-ಮಂಗಳ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಮನೆಯಲ್ಲಿ ಹಿರಿಯರು ತಮ್ಮ ಘನತೆಗೆ ತಕ್ಕಂತೆ ನಡೆದುಕೊಂಡು ಕಿರಿಯರ ಮೆಚ್ಚುಗೆಗೆ ಪಾತ್ರರಾಗುವರು, ಹಣದ ಗತಿ ಮಂದವಾಗಿದ್ದರೂ ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ, ಸಮಾಜದಲ್ಲಿ ನಿಮಗಿಂತ ಹಿರಿಯರೊಂದಿಗೆ ವ್ಯವಹರಿಸುವಾಗ ಗೌರವದಿಂದ ನಡೆದುಕೊಳ್ಳಿ. ಸಾಧಕರಿಗೆ ವಿದ್ವಾಂಸರ ಸಾಂಗತ್ಯ ದೊರೆಯಲಿದೆ. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದು ಸದ್ಯದ ಪರಿಸ್ಥಿತಿಗೆ ಸರಿ ಹೊಂದುವುದುದಿಲ್ಲ, ತೀರ್ಥಯಾತ್ರೆಗೆ ಹೊರಡುವ ಮುನ್ನ ಅದಕ್ಕೆ ಬೇಕಾದ ಪೂರ್ವಸಿದ್ಧತೆ ಸರಿಯಾಗಿರಲಿ ಬುಧ-ಗುರು-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ನಿಮ್ಮ ವ್ಯಕ್ತಿತ್ವದ ವಿಚಾರದಲ್ಲಿ ನಿಗೂಢತೆ ಕಂಡುಬರಲಿದೆ. ಸಂಗಾತಿಯ ಸಲಹೆಯಂತೆ ಸ್ಥಿರ ಆಸ್ತಿಯ ಮೇಲೆ ಹೂಡಿಕೆ ಮಾಡುವಿರಿ. ಆದರೆ ತುಸು ಎಚ್ಚರ ತಪ್ಪಿದ್ದಲ್ಲಿ ಭಾರೀ ನಷ್ಟವುಂಟಾಗಬಹುದು. ಬೇಸಾಯದಲ್ಲಿ ತೊಡಗಿಕೊಂಡ ಯುವಕರಿಗೆ ಹೆಚ್ಚಿನ ಅನುಭವವಾಗಲಿದೆ. ಪಶುಸಂಗೋಪನೆ ಲಾಭದಾಯಕವಾಗಲಿದೆ. ಸರ್ಕಾರದಿಂದಾಗ ಬೇಕಾಗಿರುವ ಕೆಲಸಗಳು ಮಂದಗತಿಯಲ್ಲಿ ಸಾಗಲಿವೆ. ಸ್ನೇಹಿತನ ಅತಿಯಾದ ಸಾಂಪ್ರದಾಯಿಕತೆ ನಿಮ್ಮಲ್ಲಿ ಬೇಸರ ಹುಟ್ಟಿಸಲಿದೆ. ಅಪರಿಚಿತ ವ್ಯಕ್ತಿಗಳೊಂದಿಗೆ ಹಣಕಾಸಿನ ವ್ಯವಹಾರದಲ್ಲಿ ಮೋಸ ಹೋಗುವ ಸಂಭವವಿದೆ. ಭಾನು-ಗುರು-ಶುಕ್ರ-ಶುಭ ದಿನಗಳು.

**ಈ ವಾರದ ವಿಶೇಷತೆಗಳು :**
**ದಿನಾಂಕ: 10.3.2024 ನೇ ಭಾನುವಾರ ಶಿವರಾತ್ರಿ ಅಮಾವಾಸ್ಯೆ**
**ದಿನಾಂಕ: 11.3.2024 ನೇ ಸೋಮವಾರ**
**ಮಹಾಬಲೇಶ್ವರ ರಥೋತ್ಸವ (ಶ್ರೀಕ್ಷೇತ್ರ ಗೋಕರ್ಣ)**

## ಕಾಂಗ್ರೆಸ್‌ಗೆ ಪಚೌರಿ ವಿದಾಯ

ಭೂಪಾಲ್, ಮಾ. 9 - ಕಾಂಗ್ರೆಸ್ ಹಿರಿಯ ನಾಯಕ ಹಾಗೂ ಮಾಜಿ ಕೇಂದ್ರ ಸಚಿವ ಸುರೇಶ್ ಪಚೌರಿ ಅವರು ಕಾಂಗ್ರೆಸ್‌ಗೆ ವಿದಾಯ ಹೇಳಿ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

ಪಚೌರಿ ಅವರೊಂದಿಗೆ ಮಾಜಿ ಸಂಸದ ಗಜೇಂದ್ರ ಸಿಂಗ್ ರಾಜುಖೇಡಿ ಸಹ ಬಿಜೆಪಿಗೆ ಸೇರಿದ್ದಾರೆ. ಲೋಕಸಭಾ ಚುನಾವಣೆ ಸಮೀಪಿಸುತ್ತಿರುವಂತೆ ಹಲವಾರು ಕಾಂಗ್ರೆಸ್ ನಾಯಕರು ಪಕ್ಷಕ್ಕೆ ವಿದಾಯ ಹೇಳುತ್ತಿದ್ದಾರೆ.

71 ವರ್ಷದ ಪಚೌರಿ ಗಾಂಧಿ ಕುಟುಂಬದ ದೀರ್ಘ ಕಾಲದ ನಿಕಟವರ್ತಿಯಾಗಿದ್ದಾರೆ. ಅವರು ರಕ್ಷಣಾ ಖಾತೆ ಅಧೀನ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ನಾಲ್ಕು ಬಾರಿ ರಾಜ್ಯಸಭಾ ಸದಸ್ಯರಾಗಿದ್ದರು.

# ವಿಶ್ವದ ಅತಿ ಉದ್ದನೆಯ ಅವಳಿ ಸುರಂಗ ಸೆಲಾ ಉದ್ಘಾಟನೆ

## ಅರುಣಾಚಲ ಪ್ರದೇಶದ 13 ಸಾವಿರ ಅಡಿ ಎತ್ತರದ ಸುರಂಗ ಮಾರ್ಗದಿಂದ ಗಡಿ ರಕ್ಷಣೆಗೆ ನೆರವು

ಗುವಾಹತಿ, ಮಾ. 9 - ವಿಶ್ವದ ಅತಿ ಉದ್ದನೆ ಅವಳಿ ಸುರಂಗ ಮಾರ್ಗವಾದ ಸೆಲಾ ಅನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಉದ್ಘಾಟಿಸಿದ್ದಾರೆ. ಇದು ಅರುಣಾಚಲ ಪ್ರದೇಶದಲ್ಲಿ 13 ಸಾವಿರ ಅಡಿ ಎತ್ತರದಲ್ಲಿದೆ.

ಸುರಂಗವನ್ನು ಗಡಿ ರಸ್ತೆಗಳ ಸಂಘಟನೆಯು 825 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿದೆ. ವಾಸ್ತವಿಕ ನಿಯಂತ್ರಣ ರೇಖೆಯ ಸಮೀಪ ಈ ವ್ಯೂಹಾತ್ಮಕವಾದ ಸುರಂಗ ಇದೆ. ಇದರಿಂದ ತವಾಂಗ್‌ಗೆ ವರ್ಷವಿಡೀ ಸಂಪರ್ಕ ಸಾಧ್ಯವಾಗಲಿದೆ.

ಈ ಯೋಜನೆಯಲ್ಲಿ ಎರಡು ಸುರಂಗಗಳಿವೆ. ಮೊದಲನೆಯದು 1,003 ಮೀಟರ್ ಉದ್ದದ ಒಂದೇ ಕೊಳವೆ ಮಾರ್ಗವಾಗಿದೆ. ಎರಡನೆಯದು 1,595 ಮೀಟರ್ ಉದ್ದವಾಗಿದ್ದು, ತುರ್ತು ನಿರ್ಗಮನ ಮಾರ್ಗ ಹೊಂದಿದೆ. ಇದಕ್ಕೆ 8.6 ಕಿ.ಮೀ.ಗಳ ಸಂಪರ್ಕ ರಸ್ತೆಗಳಿವೆ.




ತುರ್ತು ಸಂದರ್ಭದಲ್ಲಿ ಜನರು ಹಾಗೂ ವಾಹನಗಳನ್ನು ತೆರವುಗೊಳಿಸಲು ಎರಡನೇ ಸುರಂಗವನ್ನು ಬಳಸಿಕೊಳ್ಳಲು ಅವಕಾಶವಿದೆ. ಪ್ರತಿದಿನ 3 ಸಾವಿರ ಕಾರುಗಳು ಹಾಗೂ 2 ಸಾವಿರ ಲಾರಿಗಳು ಗಂಟೆಗೆ ಗರಿಷ್ಠ 80 ಕಿ.ಮೀ. ವೇಗದಲ್ಲಿ ಸಾಗಲು ಈ ಸುರಂಗ ಮಾರ್ಗದಲ್ಲಿ ಅವಕಾಶ ಇದೆ.

ಬಲಿಪಾರ - ಚರಿದೌರ್ - ತವಂಗ್ ರಸ್ತೆ ಮಾರ್ಗವು ಹಿಮ ಹಾಗೂ ಮಳೆಯ ಕಾರಣದಿಂದ ಸಾಕಷ್ಟು ವೇಳೆ ಲಭ್ಯವಿರುವುದಿಲ್ಲ. ಹೀಗಾಗಿ ಸುರಂಗ ಮಾರ್ಗದ ಅಗತ್ಯವಿದೆ.

2019ರಲ್ಲಿ ಸೆಲಾ ಸುರಂಗ ಮಾರ್ಗ ಯೋಜನೆಗೆ ಶಿಲಾನ್ಯಾಸ ನೆರವೇರಿಸಲಾಗಿತ್ತು. ಐದು ವರ್ಷಗಳಲ್ಲಿ ಸುರಂಗ ಮಾರ್ಗದ ನಿರ್ಮಾಣ ಪೂರ್ಣಗೊಳಿಸಲಾಗಿದೆ.

ಈ ಐದು ವರ್ಷಗಳಲ್ಲಿ ಸುಮಾರು 762 ದಿನಗಳಲ್ಲಿ ಭಾರೀ ಹಿಮಪಾತ ಇಲ್ಲವೇ ಮಳೆಯ ವಾತಾವರಣ ಇತ್ತು. 832 ದಿನಗಳಲ್ಲಿ ತಾಪಮಾನ ಶೂನ್ಯಕ್ಕಿಂತ ಕಡಿಮೆ ಇತ್ತು. ಇದರಿಂದಾಗಿ ಕಾಮಗಾರಿ ನಡೆಸುವುದಕ್ಕೆ ತೀವ್ರ ಅಡ್ಡಿಗಳು ಎದುರಾಗಿದ್ದವು ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಸುರಂಗದ ಮಾರ್ಗದಿಂದ ವಾಸ್ತವಿಕ ಗಡಿ ರೇಖೆಯಲ್ಲಿ ಭದ್ರತೆಗೆ ನೆರವಾಗಲಿದೆ. ಇದರ ಜೊತೆಗೆ ಗಡಿ ಪ್ರದೇಶದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೂ ನೆರವಾಗಲಿದೆ.

# ಅಜ್ಜಯ್ಯನ ಶಿವರಾತ್ರಿ ಜಾತ್ರೆಗೆ ಉಕ್ಕಡಗಾತ್ರಿ ಸಜ್ಜು

ದಕ್ಷಿಣ ಭಾರತದ ಕಾಶಿ ಕ್ಷೇತ್ರವೆನಿಸಿಕೊಂಡು ಪವಾಡಗಳ ಪುಣ್ಯ ಭೂಮಿಯಾಗಿ, ಸುಕ್ಷೇತ್ರವಾಗಿರುವ ಉಕ್ಕಡಗಾತ್ರಿ ಯಿಂದಾಗಿ ಹರಿಹರ ತಾಲ್ಲೂಕು ರಾಜ್ಯ, ಹೊರ ರಾಜ್ಯಗಳಲ್ಲಿ ಪ್ರಸಿದ್ಧಿ ಪಡೆದಿದೆ.

ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಗದ್ದಿಗೆಯ ಮಹಿಮೆ ನಾಡಿನ ಜನಮನದಲ್ಲಿ ಗಟ್ಟಿಯಾಗಿ ಉಳಿದಿದೆ.

ಗಾಳಿ, ದೆವ್ವ, ಭೂತ, ಪಿಶಾಚಿ ಹಿಡಿದವರು ತಮ್ಮ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುವರು. ತುಂಗಭದ್ರಾ ನದಿಯಲ್ಲಿ ಬಿದ್ದು, ಒದ್ದೆ ಬಟ್ಟೆಯಲ್ಲಿ ಮೆಟ್ಟಿಲೇರಿ ಬರುತ್ತಲೇ ಆವರಿಸಿಕೊಂಡಿದ್ದ ಗ್ರಹವು ಬಡಿದಾಡ ತೊಡಗಿ, ಅಜ್ಜಯ್ಯನ ದರ್ಶನವಾದೊಡನೆ ಅವರಿಂದ ಬಿಟ್ಟು ಓಡುವ ಪದ್ಧತಿ ಬಹು ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ಉಕ್ಕಡಗಾತ್ರಿಗೆ ದುಃಖಿತರಾಗಿ ಬರುವ ಭಕ್ತರು ಬೇನೆ, ಬೇಸರಿಕೆಗಳಿಂದ ಬಳಲಿ ಅಜ್ಜಯ್ಯನ ದರ್ಶನ ಪಡೆದು, ತಮ್ಮ ಸಂಕಷ್ಟಗಳನ್ನು ದೂರ ಮಾಡಿಕೊಳ್ಳಲು ಪ್ರತಿ ಅಮಾವಾಸ್ಯೆ, ಹುಣ್ಣಿಮೆ, ಸೋಮವಾರ ಮತ್ತು ದಿನನಿತ್ಯ ಸಾವಿರಾರು ಸಂಖ್ಯೆಯಲ್ಲಿ ಆಗಮಿಸುತ್ತಾರೆ.

ಈ ಸುಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ನಡೆಯುತ್ತಿದ್ದು, 250 ಕೆ.ಜಿ. ತೂಕದ ಬೆಳ್ಳಿಯಲ್ಲಿ ನಿರ್ಮಿಸಿರುವ ಬೆಳ್ಳಿ ರಥದಲ್ಲಿ ಶ್ರೀ ಕರಿಬಸವೇಶ್ವರ ಅಜ್ಜಯ್ಯನ ರಥೋತ್ಸವವು ವರ್ಷದಲ್ಲಿ ಎರಡು ಬಾರಿ ನಡೆಯುತ್ತಾ ಬಂದಿದೆ. ಅಜ್ಜಯ್ಯನ ಗರ್ಭಗುಡಿ ಸುತ್ತ 30 ಕೆ.ಜಿ. ಬೆಳ್ಳಿ ಕವಚ ಮತ್ತು ಅಜ್ಜಯ್ಯನ ಗದ್ದುಗೆ ಇರುವ ಗರ್ಭ ಗುಡಿಯ ಗೋಡೆಗಳಿಗೆ ಸುಮಾರು 5 ಲಕ್ಷ ರೂ. ವೆಚ್ಚದಲ್ಲಿ ಹಿತ್ತಾಳೆ ಕವಚ ಅಳವಡಿಸಲಾಗಿದೆ. ಅಲ್ಲದೇ ಕಳೆದ 4 ವರ್ಷಗಳ ಹಿಂದೆ ಸುಮಾರು 7.50 ಲಕ್ಷ ರೂ. ವೆಚ್ಚದಲ್ಲಿ ಹಳೆಯ ರಥಕ್ಕೆ ಹೊಸ ತಂತ್ರಜ್ಞಾನದ ಸ್ಪರ್ಷ ನೀಡಿ, ಸುರಕ್ಷತೆಯ ದೃಷ್ಟಿಯಿಂದ ರಥಕ್ಕೆ ಪವರ್ ಸ್ಟೇರಿಂಗ್ ಅಳವಡಿಸಲಾಗಿದೆ. ಜೊತೆಗೆ ಈ ವರ್ಷ ಮತ್ತೊಂದು ಹೊಸ ಕಟ್ಟಡದಲ್ಲಿ ಭಕ್ತರ ಅನುಕೂಲ ಕ್ಕಾಗಿ ವಸತಿ ಕೊಠಡಿಗಳನ್ನು ನಿರ್ಮಿಸಲಾಗಿದೆ.

**ಚಿನ್ನದ ಕಿರೀಟ :** ಭಕ್ತರ ದೇಣಿಗೆಯಿಂದ ಸುಮಾರು 1.65 ಕೋಟಿ ರೂ. ವೆಚ್ಚದಲ್ಲಿ ಏಳು



**ಇಂದಿನಿಂದ ಒಂದು ವಾರ ಜಾತ್ರೆ, ನಾಳೆ ರಥೋತ್ಸವ**

ಹೆಡೆಯ ನಾಗರವನ್ನುಳ್ಳ 2.5 ಕೆ.ಜಿ. ತೂಕದ ಚಿನ್ನದ ಕಿರೀಟವನ್ನು ತಯಾರಿಸಿ ಮಾ.8ರ ಶುಕ್ರವಾರ ಅಜ್ಜಯ್ಯನಿಗೆ ಧಾರಣೆ ಮಾಡಿರುವುದು ಈ ವರ್ಷದ ಜಾತ್ರೆಯಲ್ಲಿ ಭಕ್ತರ ಗಮನ ಸೆಳೆಯಲಿದೆ.

**ಜಾತ್ರೆಗೆ ಸಿದ್ಧತೆ :** ಇಂದಿನಿಂದ ಒಂದು ವಾರಗಳ ಕಾಲ ನಡೆಯುವ ಅಜ್ಜಯ್ಯನ ಮಹಾ ಶಿವರಾತ್ರಿ ಜಾತ್ರಾ ಮಹೋತ್ಸವಕ್ಕೆ ಕ್ಷೇತ್ರದಲ್ಲಿ ಸಿದ್ಧತೆಗಳು ಪೂರ್ಣಗೊಂಡಿದ್ದು, ಜಾತ್ರೆಗೆ ಬರುವ ಭಕ್ತರ ವಾಸ್ತವ್ಯಕ್ಕೆ 500ಕ್ಕೂ ಹೆಚ್ಚು ಕೊಠಡಿಗಳ ವ್ಯವಸ್ಥೆ ಮಾಡಲಾಗಿದೆ. ಮಹಿಳೆಯರಿಗೆ ಮತ್ತು ಪುರುಷರಿಗೆ 80 ಪ್ರತ್ಯೇಕ ಶೌಚಾಲಯ ಮತ್ತು ಸಾರ್ವಜನಿಕ ಶೌಚಾಲಯಗಳ ವ್ಯವಸ್ಥೆ ಅಲ್ಲದೇ, ಗದ್ದಿಗೆಯ ಬೃಹತ್ ಕಲ್ಯಾಣ ಮಂಟಪ ಗಳು ಸೇವೆಗೆ ಲಭ್ಯವಿದ್ದು, ಜನರಿಗೆ ಯಾವುದೇ ತೊಂದ ರೆಯಾಗದಂತೆ ನೋಡಿಕೊಳ್ಳಲು ಸಕಲ ರೀತಿಯಲ್ಲೂ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಟ್ರಸ್ಟ್ ಕಮಿಟಿಯ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

ಉಕ್ಕಡಗಾತ್ರಿಗೆ ಸೇರುವ 3 ಮಾರ್ಗಗಳಲ್ಲಿ ಒಟ್ಟು 70 ಎಕರೆ ಪ್ರದೇಶದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಅಲ್ಲಿ ಕೂಡಾ 13 ಜನರೇಟರ್ ಮೂಲಕ ಲೈಟಿಂಗ್ ವ್ಯವಸ್ಥೆ ಮಾಡಿದ್ದೇವೆ. ಜೊತೆಗೆ ತಾತ್ಕಾಲಿಕ ಹೊರ ಪೊಲೀಸ್ ಠಾಣೆ ನಿರ್ಮಿಸಿದ್ದು, 24x7 ಕಾರ್ಯ ನಿರ್ವಹಿಸಲಿದೆ. ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಫ್ಲೆಕ್ಸ್‌ಗಳನ್ನು ಹಾಕಲಾಗಿದೆ, ಜಾತ್ರೆಗೆ ಎಸ್ಪಿ ಉಮಾ ಪ್ರಶಾಂತ್ ಅವರ ಮಾರ್ಗದರ್ಶನದಲ್ಲಿ ಸೂಕ್ತ ಬಂದೋ ಬಸ್ತ್ ಕೈಗೊಳ್ಳಲು 100ಕ್ಕೂ ಹೆಚ್ಚು ಸಿಬ್ಬಂದಿಗಳನ್ನು ಭದ್ರತೆಗೆ ನೇಮಿಸಲಾಗಿದೆ ಎಂದು ಪಿಎಸ್ಐ ಪ್ರಭು ಮಾಹಿತಿ ನೀಡಿದರು.

60 ವರ್ಷ ಮೇಲ್ಪಟ್ಟವರನ್ನು ಹಾಗೂ 10 ವರ್ಷದೊಳಗಿನ ಮಕ್ಕಳನ್ನು ಜಾತ್ರೆಗೆ ಕರೆ ತರಬಾರದೆಂದು ಸುರೇಶ್ ಮನವಿ ಮಾಡಿದ್ದಾರೆ. ಸ್ವಚ್ಛತೆ ಹಿನ್ನೆಲೆಯಲ್ಲಿ ಆವರಣದಲ್ಲಿ ತೆಂಗಿನಕಾಯಿ ಒಡೆಯುವುದು, ಎಲ್ಲೆಂದರಲ್ಲಿ ನಿಂಬೆಹಣ್ಣು ತುಳಿಯುವುದು, ಒದ್ದೆ ಬಟ್ಟೆಯಲ್ಲಿ ಉರುಳು ಸೇವೆ ಮಾಡುವುದು, ನದಿಯಲ್ಲಿ ಬಟ್ಟೆ ಮತ್ತು ಫೋಟೋಗಳನ್ನು ಬಿಸಾಡುವುದನ್ನು ನಿಷೇಧಿಸಲಾಗಿದೆ.

**ಜಾತ್ರಾ ಕಾರ್ಯಕ್ರಮಗಳು :** ಅಜ್ಜಯ್ಯನ ಜಾತ್ರೆಯ ಮೊದಲ ದಿನವಾದ ಇಂದು ಬೆಳಿಗ್ಗೆ 9 ಗಂಟೆಗೆ ಶ್ರೀ ಕರಿ ಬಸವೇಶ್ವರ ಸ್ವಾಮಿ ಗದ್ದುಗೆಯ ಪೂಜೆ, ನಂದಿ ಧ್ವಜಾರೋಹಣ ಮಾಡುವ ಮೂಲಕ ಜಾತ್ರೆಗೆ ಚಾಲನೆ ನೀಡಲಾಗುವುದು. ಇದೇ ದಿನ ರಾತ್ರಿ 8.30ಕ್ಕೆ ಜಾಗರಣೆ, ಭಜನೆ ಮತ್ತು ಕೀರ್ತನೆ ನಡೆಯಲಿವೆ. ದಿನಾಂಕ 11 ರ ಸೋಮವಾರ ಬೆಳಿಗ್ಗೆ 8ಕ್ಕೆ ಶ್ರೀ ನಂದಿಗುಡಿ ವೃಷಭಪುರಿ ಸಂಸ್ಥಾನ 1108 ಜಗದ್ಗುರು ಶ್ರೀ ಶ್ರೀ ಸಿದ್ಧರಾಮೇಶ್ವರ ದೇಶಿಕೇಂದ್ರ ಮಹಾಸ್ವಾಮಿಗಳ ಅಮೃತ ಹಸ್ತದಿಂದ ರಥೋತ್ಸವದ ಮಹಾಪೂಜೆ, ನಂತರ ಸಕಲ ವೈಭವಗಳೊಂದಿಗೆ ಮಹಾ ರಥೋತ್ಸವ ಪ್ರಾರಂಭವಾಗಲಿದೆ.

ದಿನಾಂಕ 12, 13, 14 ರಂದು ಜವಳ, ಹರಕೆ, ಕಾಣಿಕೆ, ಬಯಲು ಜಂಗೀ ಕುಸ್ತಿಗಳು, 15ರ ಶುಕ್ರವಾರ ಫಳಾರ ಹಾಕಿಸುವುದು, 16ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಅಜ್ಜಯ್ಯನ ಬೆಳ್ಳಿ ರಥೋತ್ಸವ ಜರುಗಲಿದ್ದು, ರಾತ್ರಿ ಪಾಲಿಕೋತ್ಸವ ನಡೆಯಲಿದೆ. ಇದೇ ದಿನಾಂಕ 17ರ ಭಾನುವಾರ ಬೆಳಿಗ್ಗೆ ಭಕ್ತರಿಗೆ ಫಳಾರ ಹಂಚುವ ಮೂಲಕ ಜಾತ್ರೆಗೆ ತೆರೆ ಎಳೆಯಲಾಗುವುದು.

## ಡಿಎಂಕೆ ಮೈತ್ರಿಕೂಟದ ಸೀಟು ಹಂಚಿಕೆ ಪೂರ್ಣ

ಚೆನ್ನೈ, ಮಾ. 9 – ಮುಂದಿನ ಲೋಕಸಭಾ ಚುನಾವಣೆಗಾಗಿ ತಮಿಳುನಾಡಿನ ಆಡಳಿತಾರೂಢ ಡಿ.ಎಂ.ಕೆ.ಯು ಮಿತ್ರ ಪಕ್ಷಗಳ ಜೊತೆ ಸೀಟು ಹಂಚಿಕೆ ಪೂರ್ಣಗೊಳಿಸಿದೆ.

ಡಿ.ಎಂ.ಕೆ. ಪಕ್ಷ 21 ಸೀಟುಗಳನ್ನು ಪಡೆದುಕೊಂಡಿದೆ. ಕಾಂಗ್ರೆಸ್ ಪಕ್ಷಕ್ಕೆ ಒಂಭತ್ತು ಸೀಟು ನೀಡಲಾಗಿದೆ. ಸಿಪಿಐ (ಎಂ), ಸಿಪಿಐ ಹಾಗೂ ವಿಸಿಕೆ ಪಕ್ಷಗಳು ತಲಾ ಎರಡು ಸೀಟು ಪಡೆದಿವೆ. ಎಂಡಿಎಂಕೆ, ಕೆಎಂಡಿಕೆ ಹಾಗೂ ಐಯುಎಂಎಲ್‌ಗಳಿಗೆ ತಲಾ ಒಂದು ಸೀಟು ನೀಡಲಾಗಿದೆ.

ನಟ ಕಮಲ್ ಹಾಸನ್ ಅವರು ಎಂಎನ್ಎಂ ಪಕ್ಷವೂ ಮೈತ್ರಿಕೂಟಕ್ಕೆ ಸೇರ್ಪಡೆಯಾಗಿದೆ. ಆದರೆ, ಪಕ್ಷಕ್ಕೆ ಯಾವುದೇ ಸೀಟು ನೀಡಿಲ್ಲ. ಮುಂದಿನ ವರ್ಷ ನಡೆಯಲಿರುವ ರಾಜ್ಯಸಭಾ ಚುನಾವಣೆ ಸಂದರ್ಭದಲ್ಲಿ ಒಂದು ಸೀಟು ನೀಡಲಾಗುವುದು.

## ಬಿಜೆಪಿ ಸಮಾರಂಭದಲ್ಲಿ ನೂಕು ನುಗ್ಗಲು, ಮಹಿಳೆ ಸಾವು

ನಾಗಪುರ, ಮಾ. 9 – ಬಿಜೆಪಿ ಪಕ್ಷದ ವತಿಯಿಂದ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಆಯೋಜಿಸಲಾಗಿದ್ದ ಪಾತ್ರೆಗಳ ವಿತರಣೆ ಸಮಾರಂಭದಲ್ಲಿ ನೂಕು ನುಗ್ಗಲು ಉಂಟಾಗಿ 65 ವರ್ಷದ ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ ಹಾಗೂ ನಾಲ್ವರು ಗಾಯಗೊಂಡಿದ್ದಾರೆ.

ನಾಗಪುರದ ಬಿಜೆಪಿ ಘಟಕವು ಈ ಸಮಾರಂಭ ಆಯೋಜಿಸಿತ್ತು. ಬೆಳಿಗ್ಗೆ 10.30ಕ್ಕೆ ಸಮಾರಂಭ ಆರಂಭವಾಗಬೇಕಿತ್ತು. ಆದರೆ, ಜನರು ಬೆಳಿಗ್ಗೆ 5 ಗಂಟೆಯಿಂದಲೇ ಗೇಟುಗಳ ಬಳಿ ಕಾದು ನಿಂತಿದ್ದರು.

ಬಾಗಿಲು ತೆಗೆದ ತಕ್ಷಣ ಜನರು ಒಳಗೆ ನುಗ್ಗಿದಾಗ ಕೆಲ ಮಹಿಳೆಯರು ಬಿದ್ದು ಗಾಯವಾಗಿದೆ. ಮನುಬಾಯಿ ರಾಜಪೂತ್ ಎಂಬುವವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಅವ್ಯವಸ್ಥೆಯ ಕಾರಣದಿಂದಾಗಿ ಮಹಿಳೆಯ ಸಾವು ಸಂಭವಿಸಿದೆ. ಈ ಬಗ್ಗೆ ಪ್ರಕರಣ ದಾಖಲಿಸಬೇಕು ಎಂದು ಎನ್.ಸಿ.ಪಿ. (ಎಸ್.ಪಿ.) ಪಕ್ಷದ ನಾಯಕ ಅನಿಲ್ ದೇಶ್‌ಮುಖ್ ಒತ್ತಾಯಿಸಿದ್ದಾರೆ.

## ಹೆಚ್.ಎಂ. ನವೀನ್‌ಗೆ ಪಿಎಚ್‌ಡಿ



ದಾವಣಗೆರೆ, ಮಾ. 9 - ನಗರದ ಬಿಐಇಟಿ ಕಾಲೇಜಿನ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಹೆಚ್.ಎಂ. ನವೀನ್ ಅವರಿಗೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಪಿಹೆಚ್‌ಡಿ ಪದವಿ ನೀಡಿದೆ. 'ಅನಾಲಿಸೀಸ್ ಆಫ್ ಲಂಗ್ ಕ್ಯಾನ್ಸರ್ ಯೂಸಿಂಗ್ ಮಷಿನ್ ಲರ್ನಿಂಗ್ ಮೆಥೆಡ್ಸ್' ವಿಷಯವಾಗಿ ನವೀನ್ ಅವರು ಮಂಡಿಸಿದ್ದ ಮಹಾ ಪ್ರಬಂಧಕ್ಕೆ ಈ ಪದವಿ ನೀಡಲಾಗಿದೆ.

## ಮಧ್ಯಪ್ರದೇಶ ಸಚಿವಾಲಯದಲ್ಲಿ ಬೆಂಕಿ

ಭೂಪಾಲ್, ಮಾ. 9 - ಮಧ್ಯ ಪ್ರದೇಶದ ಸಚಿವಾಲಯ ಸಂಕೀರ್ಣದಲ್ಲಿರುವ ವಲ್ಲಭ ಭವನದ ಮೂರನೇ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಆದರೆ, ಯಾರಿಗೂ ಗಾಯಗಳಾಗಿಲ್ಲ. ಐದು ಗಂಟೆಯ ನಂತರ ಬೆಂಕಿ ನಂದಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಬೆಳಿಗ್ಗೆ 9.30ರ ಸಮಯದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಆ ಸಮಯದಲ್ಲಿ ಭವನವು ಬಹುತೇಕ ಖಾಲಿಯಾಗಿತ್ತು. ಭ್ರಷ್ಟಾಚಾರದ ಸಾಕ್ಷಿ ಮುಚ್ಚಿ ಹಾಕಲು ಈ ಸಂಚು ನಡೆಸಲಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಜಿತು ಪಟ್ವಾರಿ ಅವರು ಆರೋಪಿಸಿ ಪ್ರತಿಭಟನೆ ನಡೆಸಿದ್ದಾರೆ.

## ಚುನಾವಣಾ ಆಯುಕ್ತ ಗೋಯಲ್ ರಾಜೀನಾಮೆ

# ಚುನಾವಣಾ ಆಯೋಗದಲ್ಲೀಗ ಮುಖ್ಯ ಆಯುಕ್ತರೊಬ್ಬರೇ

ನವದೆಹಲಿ, ಮಾ. 9 – ಲೋಕಸಭಾ ಚುನಾವಣೆ ದಿನಾಂಕ ಘೋಷಣೆ ಸನಿಹದಲ್ಲಿರುವಾಗಲೇ ಚುನಾವಣಾ ಆಯುಕ್ತ ಅರುಣ್ ಗೋಯಲ್ ರಾಜೀನಾಮೆ ನೀಡಿದ್ದಾರೆ. ಅವರ ಅವಧಿ ಡಿಸೆಂಬರ್ 5, 2027ರವರೆಗೆ ಇತ್ತು. ಅಧಿಕಾರದಲ್ಲಿ ಮುಂದುವರೆದಿದ್ದರೆ ಮುಂದಿನ ವರ್ಷ ಫೆಬ್ರವರಿಯಲ್ಲಿ ಅವರು ಮುಖ್ಯ ಚುನಾವಣಾ ಆಯುಕ್ತರಾಗುತ್ತಿದ್ದರು.

ಗೋಯಲ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ರಾಜೀನಾಮೆ ನೀಡಿದ್ದಾರೆ. ಶನಿವಾರದಿಂದ ಜಾರಿಗೆ ಬರುವಂತೆ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ ಎಂದು ಕೇಂದ್ರ ಕಾನೂನು ಸಚಿವಾಲಯ ತಿಳಿಸಿದೆ. ಅವರ ರಾಜೀನಾಮೆಗೆ ಕಾರಣವೇನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಗೋಯಲ್ ಅವರು 1985ರ ಪಂಜಾಬ್ ತಂಡದ ಐ.ಎ.ಎಸ್. ಅಧಿಕಾರಿಯಾಗಿದ್ದರು. 2022ರ ನವೆಂಬರ್‌ನಲ್ಲಿ ಅವರು ಚುನಾವಣಾ ಆಯುಕ್ತರಾಗಿ ಸೇರ್ಪಡೆಯಾಗಿದ್ದರು. ಚುನಾವಣಾ ಆಯೋಗದಲ್ಲಿ ಮೂವರು ಸದಸ್ಯರಿದ್ದಾರೆ. ಕಳೆದ ಫೆಬ್ರವರಿಯಲ್ಲಿ ಚುನಾವಣಾ ಆಯುಕ್ತ ಅನುಪ್ ಚಂದ್ರ ಪಾಂಡೆ ನಿವೃತ್ತರಾಗಿದ್ದರು. ಹೀಗಾಗಿ ಆಯೋಗದಲ್ಲಿ ಕೇವಲ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಮಾತ್ರ ಉಳಿದುಕೊಂಡಿದ್ದಾರೆ.

ಈ ಹಿಂದೆ 2020ರ ಆಗಸ್ಟ್ ತಿಂಗಳಲ್ಲಿ ಅಶೋಕ್ ಲವಾಸಾ ಅವರು ಚುನಾವಣಾ ಆಯುಕ್ತ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಹಿಂದಿನ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳಲ್ಲಿ ಅವರು ಭಿನ್ನಮತದ ತೀರ್ಪು ನೀಡಿದ ನಂತರ ರಾಜೀನಾಮೆ ನೀಡಿದ್ದರು.

ಮೂಲ ಚುನಾವಣಾ ಆಯೋಗಕ್ಕೆ ಒಬ್ಬರೇ ಆಯುಕ್ತರಿದ್ದರು. ಪ್ರಸಕ್ತ ಮುಖ್ಯ ಚುನಾವಣಾ ಆಯುಕ್ತ ಹಾಗೂ ಇಬ್ಬರು ಚುನಾವಣಾ ಆಯುಕ್ತರಿದ್ದಾರೆ. ಬಹುಮತದ ಆಧಾರದ ಮೇಲೆ ಚುನಾವಣಾ ಆಯೋಗ ನಿರ್ಧಾರ ತೆಗೆದುಕೊಳ್ಳುತ್ತದೆ.

ಚುನಾವಣಾ ಆಯುಕ್ತ ಗೋಯಲ್ ರಾಜೀನಾಮೆ ಬಗ್ಗೆ ಕಾಂಗ್ರೆಸ್ ಪಕ್ಷ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಚುನಾವಣಾ ಆಯೋಗದಂತಹ ಸಂವಿಧಾನಿಕ ಸಂಸ್ಥೆಯ ಕಾರ್ಯನಿರ್ವಹಣೆ ಬಗ್ಗೆ ಪಾರದರ್ಶಕತೆ ಇಲ್ಲದಂತಾಗಿದೆ ಎಂದು ಹೇಳಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಸರ್ಕಾರ ಚುನಾವಣಾ ಆಯೋಗದ ಮೇಲೆ ಒತ್ತಡ ಹೇರುತ್ತಿದೆ ಎಂದು ಆರೋಪಿಸಿದ್ದಾರೆ.

# ಬಹುತ್ವ ಭಾರತದ ನಿರ್ಮಾಣಕ್ಕೆ ಅಂಬೇಡ್ಕರ್ ಜಾಗರಣೆ ಅಗತ್ಯ

## ಜಗಳೂರಿನ ಕಾರ್ಯಕ್ರಮದಲ್ಲಿ ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಪ್ರೊ. ಎ.ಬಿ.ರಾಮಚಂದ್ರಪ್ಪ

ಜಗಳೂರು, ಮಾ.9- ಬಹುತ್ವದ ಭಾರತದ ನಿರ್ಮಾಣಕ್ಕೆ ಅಂಬೇಡ್ಕರ್ ಚಿಂತನೆಗಳು ಭದ್ರ ಬುನಾದಿಯಾಗಿವೆ. ಅವುಗಳ ರಕ್ಷಣೆಗಾಗಿ ಅಂಬೇಡ್ಕರ್ ಜಾಗರಣೆ ಅಗತ್ಯವಾಗಿದೆ ಎಂದು ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಪ್ರೊ. ಎ.ಬಿ.ರಾಮಚಂದ್ರಪ್ಪ ಹೇಳಿದರು.

ಅವರು ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಶುಕ್ರವಾರ ಸಂಜೆ ಶಿವರಾತ್ರಿ ನಿಮಿತ್ತ 'ಅಂಬೇಡ್ಕರ್ ಜಾಗರಣೆ ರಾತ್ರಿ' ಕಾರ್ಯಕ್ರಮ ಕುರಿತು ಮಾತನಾಡಿದರು.

ಜಾತಿ ಧರ್ಮಗಳ ಬೆಸೆದು ಬಹುತ್ವ ಸಾರುವಂತಹ ದೇಶದಲ್ಲಿ ಏಕ ಆರಾಧನೆಗಳು ಮುನ್ನೆಲೆಗೆ ಬರುತ್ತಿವೆ. ಇದರ ಹಿಂದೆ ಸಮಾನತೆ ತತ್ವ ಸಾರಿದ ಸಂವಿಧಾನದ ಶಕ್ತಿಯನ್ನು ಕುಂದಿಸುವ ಹುನ್ನಾರ ನಡೆಯುತ್ತಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಎಲ್ಲಿ ಧರ್ಮ ಆರಾಧನೆ ನಡೆಯಬೇಕಿತ್ತೋ ಅಲ್ಲಿ ಏಕ ವ್ಯಕ್ತಿಯ ಪಾರುಪತ್ಯ ನಡೆಯುತ್ತಿದೆ. ಎಲ್ಲಿ ಪ್ರಜಾಪ್ರಭುತ್ವ ಮೌಲ್ಯ ಸಾರಬೇಕಿತ್ತೋ ಅಲ್ಲಿ ಇಂದು ಧರ್ಮದ ಪ್ರಚಾರ ನಡೆಯುತ್ತಿದೆ. ಬಹುತ್ವ ಭಾರತದ ಕನಸ್ಸು ಕಂಡವರನ್ನು ದೇಶದ್ರೋಹಿಗಳು ಎಂದು ಬಿಂಬಿಸಲಾಗುತ್ತಿದೆ. ಪ್ರಜಾಪ್ರಭುತ್ವ ಮೌಲ್ಯಗಳಿಗೆ ದಕ್ಕೆ ತರುವಂತಹ ವಾತವರಣವಿದ್ದು, ಇಂದಿನ ಯುವಕರಿಗೆ ಭವಿಷ್ಯದಲ್ಲಿ ದೇಶ ನಿರ್ಮಾಣ ಮಾಡುವಂತಹ ವಿದ್ಯಾರ್ಥಿಗಳಿಗೆ



ಅಂಬೇಡ್ಕರ್ ಕುರಿತು ತಿಳಿಸುವಂತಹ ಜಾಗರಣೆ ಅಗತ್ಯವಾಗಿದೆ.

ನಾವೆಲ್ಲಾ ಬಾಲ್ಯದಲ್ಲಿ ಸೀತಾಮಾತೆ, ಲಕ್ಷ್ಮಣ, ಆಂಜನೇಯ ಅವರನ್ನು ಒಳಗೊಂಡ ಶ್ರೀರಾಮನನ್ನು ಕಂಡು ಕೇಳಿದ್ದೇವೆ. ಆದರೆ, ಈಗ ಶ್ರೀರಾಮ ಏಕದೇವರೊಬ್ಬನನ್ನೇ ಆರಾಧಿಸುವುದು ಎಷ್ಟರ ಮಟ್ಟಿಗೆ ಸರಿ ? ಎಲ್ಲರೂ ಒಳಗೊಂಡ ಬಹುತ್ವದ ಕಲ್ಪನೆಯ ಭಾರತ ಕಟ್ಟಲು ಬುದ್ದ - ಬಸವಣ್ಣ - ಅಂಬೇಡ್ಕರ್ ಚಿಂತನೆಗಳಿಂದ ಮಾತ್ರ ಸಾಧ್ಯ ಎಂದು ಪ್ರೊ. ರಾಮಚಂದ್ರಪ್ಪ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಬಿ. ದೇವೇಂದ್ರಪ್ಪ ಮಾತನಾಡಿ, ಶಿವರಾತ್ರಿಗೂ ಅಂಬೇಡ್ಕರ್‌ಗೂ ಏನು ಸಂಬಂಧ ? ಎಂದು ಎಲ್ಲರಲ್ಲೂ ಪ್ರಶ್ನೆ ಮೂಡಿರಬಹುದು. ಆದರೆ, ಇವತ್ತು ದೇವರು ಮತ್ತು ಧರ್ಮಗಳ ಬಗ್ಗೆ ವೈಜ್ಞಾನಿಕ ವೈಚಾರಿಕ ಆಲೋಚನೆಗಳು ಅಗತ್ಯವಾಗಿದೆ. ಅಂತಹ ವಿಷಯಗಳ ಬಗ್ಗೆ ಚಿಂತಸಿದ ಅಂಬೇಡ್ಕರ್, ಧರ್ಮ ದೇವರು ಬಗ್ಗೆ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಅವರ ತತ್ವಗಳ ಬಗ್ಗೆ ಅರಿವು ಮೂಡಿಸಲು ಅಂಬೇಡ್ಕರ್ ಜಾಗರಣೆ ಕಾರ್ಯಕ್ರಮ ಆಯೋಜಿಸಿದ್ದೇನೆ. ಬಹುಷಃ ರಾಜ್ಯದಲ್ಲಿ ಇದೊಂದು ವಿನೂತನ ಕಾರ್ಯಕ್ರಮವಾಗಿದೆ. ಮುಂದೊಂದು ದಿನ ವೈಚಾರಿಕ ದಿನಕ್ಕೆ ಸಾಕ್ಷಿಯಾಗಲಿದೆ ಎನ್ನುವುದು ನನ್ನ ಆಶಯವಾಗಿದೆ ಎಂದರು.

ನಿವೃತ್ತ ಉಪನ್ಯಾಸಕ ಸುಭಾಷ್ ಚಂದ್ರ ಬೋಸ್ ಮಾತನಾಡಿ, ಅಂಬೇಡ್ಕರ್ ಅವರಂತಹ ವಿಶ್ವಜ್ಞಾನಿ ಮತ್ತೊಬ್ಬರಿಲ್ಲ. ತಮ್ಮ ಜೀವಿತಾವಧಿಗೆ ನೋವುಂಡು ನಮ್ಮೆಲ್ಲರಿಗೂ ಸಂವಿಧಾನ ಗ್ರಂಥ ನೀಡಿದ್ದಾರೆ. ಅದರಡಿಯಲ್ಲಿ ನಾವೆಲ್ಲರೂ ಸಮಾನತೆ ಭಾರತವನ್ನು ಕಟ್ಟಬೇಕಿದೆ. ಬುದ್ದ - ಬಸವಣ್ಣ ಅವರು ಜಾತಿಯಿಂದ ದೊಡ್ಡವರಾದವರಲ್ಲ, ನೀತಿಯಿಂದ ದೊಡ್ಡವರಾದವರು. ಮನುಷ್ಯರೆಲ್ಲಾ ಸಮಾನರೇ ಎಂಬ ತತ್ವದಲ್ಲಿ ನಂಬಿಕೆ ಇಟ್ಟು ಅಂತಹ ಉತ್ತಮ ಮಾರ್ಗದ ಕಡೆ ಜನರನ್ನು ಕೊಂಡೊಯ್ಯಲು ಇಂತಹ ಚಿಂತನೆ, ಜಾಗರಣೆ ಆಚರಿಸಲು ಶಾಸಕರು ಚಿಂತಿಸಿರುವುದು ಒಳ್ಳೆಯದೇ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕೆಪಿಸಿಸಿ ಎಸ್ಸಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ, ಹಿರಿಯ ಸಾಹಿತಿ ಎನ್.ಟಿ. ಯರ್ರಿಸ್ವಾಮಿ, ಉಪನ್ಯಾಸಕ ಎಲ್.ಟಿ.ತಿಪ್ಪೇಸ್ವಾಮಿ, ಅಂಬೇಡ್ಕರ್ ಪುತ್ಥಳಿ ಸಮಿತಿ ಅಧ್ಯಕ್ಷ ಪೂಜಾರ್ ಸಿದ್ದಪ್ಪ ವೇದಿಕೆ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಡಿವೈಎಸ್‌ಪಿ ಪ್ರಹ್ಲಾದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮದ್, ಮುಖಂಡರಾದ ಸಣ್ಣ ಸೂರಯ್ಯ, ಬಿ.ಮಹೇಶ್ವರಪ್ಪ, ಪಟ್ಟಣ ಪಂಚಾಯತಿ ಸದಸ್ಯರಾದ ಲುಕ್ಮಾನ್ ಖಾನ್, ರವಿಕುಮಾರ್, ಡಿ.ಎಸ್.ಎಸ್. ಸಂಚಾಲಕ ಕುಬೇಂದ್ರಪ್ಪ, ಸತೀಶ್, ಮಾನವ ಬಂಧುತ್ವ ವೇದಿಕೆಯ ಸಂಚಾಲಕ ಧನ್ಯಕುಮಾರ್ ಪ್ರಗತಿಪರ ಒಕ್ಕೂಟ ನಾಗಲಿಂಗಪ್ಪ, ಗ್ಯಾಸ್ ಓಬಣ್ಣ, ವಕೀಲರು ಹನುಮಂತಪ್ಪ, ಸಣ್ಣ ಓಬಯ್ಯ, ಮಾದಿಹಳ್ಳಿ ಮಂಜಪ್ಪ, ಎಂ.ರಾಜಪ್ಪ, ಗೋಗುದ್ದು ತಿಪ್ಪೇಸ್ವಾಮಿ, ಸಿದ್ದಮ್ಮನಹಳ್ಳಿ ಬಸವರಾಜ್ ಸೇರಿದಂತೆ ಅನೇಕರು ಇದ್ದರು.

# ಕನ್ನಡ ನೆಲ, ಜಲ, ನಾಡು, ನುಡಿ ರಕ್ಷಣೆಯ ಅರಿವು ಅಗತ್ಯ : ನ್ಯಾಯವಾದಿ ಸಿದ್ದಪ್ಪ



**ಹರಪನಹಳ್ಳಿ**

ಹರಪನಹಳ್ಳಿ, ಮಾ.9- ಕನ್ನಡ ನೆಲ, ಜಲದ ರಕ್ಷಣೆ ಅಭಿಮಾನದ ಬಗ್ಗೆ ಪ್ರತಿಯೊಬ್ಬರಲ್ಲಿ ಅರಿವು ಮೂಡಿಸುವ ಕೆಲಸ ಆಗಬೇಕಿದೆ ಎಂದು ನ್ಯಾಯವಾದಿ ಸಿದ್ದಪ್ಪ ಹೇಳಿದರು.

ಪಟ್ಟಣದ ಹರಿಹರ ರಸ್ತೆಯ ಬಳಿ ಬಸ್ ಡಿಪೋ ಹಿಂಭಾಗದ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಬೆಣ್ಣಿಹಳ್ಳಿ ಚಪ್ಪರದಹಳ್ಳಿ ಶ್ರೀಮತಿ ಬಸಮ್ಮ ಕೆಂಚಪ್ಪ ದತ್ತಿ.ಲಿಂ.ತೆಗ್ಗಿನ ಮಠದ ಚೆನ್ನವೀರಯ್ಯ ಶಾಸ್ತ್ರಿಗಳು ಮತ್ತು ಕುಟುಂಬ ವರ್ಗದ ದತ್ತಿ.ಮೇಘರಾಜ ಜೈನ್ ದತ್ತಿ. ಕೆ.ಎಂ. ಗುರುಸಿದ್ದಯ್ಯ ಮತ್ತು ಶ್ರೀಮತಿ ಕೆ.ಎಂ.ಗಿರಿಜಮ್ಮ ಜ್ಞಾಪಕಾರ್ಥ ಗುರುಗಿರಿ ದತ್ತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡದ ಬಗ್ಗೆ ಕಾಳಜಿ ಮತ್ತು ಕಳಕಳಿ ಇಟ್ಟುಕೊಂಡವರು ಕನ್ನಡದಲ್ಲೇ ವ್ಯವಹಾರ ಮಾಡುವುದನ್ನು ರೂಢಿಸಿಕೊಳ್ಳಬೇಕು. ಪರಭಾಷೆಗಳು ಎಷ್ಟೇ ನಮ್ಮ ಮೇಲೆ ಪ್ರಭಾವ ಬೀರಿದರೂ ನಾವು ನಮ್ಮ ಮಾತೃಭಾಷೆಯನ್ನು ಎಂದಿಗೂ ಮರೆಯಬಾರದು. ಕನ್ನಡ ಅನಿವಾರ್ಯ ಎಂಬ ಭಾವನೆಯಲ್ಲಿ ಭಾಷೆಯನ್ನು ಬಳಸಿ, ಬೆಳೆಸಿದಾಗ ಖಂಡಿತಾ ಕನ್ನಡ ಉಳಿಯುತ್ತದೆ ಎಂದರು.

ಹಾಸ್ಯ ಸಾಹಿತ್ಯ ಕುರಿತು ಹಿರಿಯ ಸಾಹಿತಿ ಸುಭದ್ರಮ್ಮ ಮಾಡ್ಲಗೇರಿ ಮಾತನಾಡಿ, ಹಾಸ್ಯವು ಸಾಹಿತ್ಯದ ಒಂದು ಪ್ರಕಾರವಾಗಿ ಕನ್ನಡದಲ್ಲಿ ಎಂದೂ ಅರಳಿ ಬರಲಿಲ್ಲ. ಸಾಹಿತ್ಯದಲ್ಲಿ ಸ್ಥಾನ ಪಡೆಯಲೂ ಹಾಸ್ಯಕ್ಕೆ ಸುಮಾರು ಏಳೆಂಟು ದಶಕಗಳೇ ಬೇಕಾದವು.

ಹೃದಯದ ನಿರ್ಮಲ ಭಾವ ಮುಖದಲ್ಲಿ ಪ್ರಫುಲ್ಲಿತಗೊಳ್ಳುತ್ತದೆ. ಯಾವ ಭಿಡೆಯೂ ಇಲ್ಲದೆ ಹೂವು ಅರಳುವ ಹಾಗೆ. ಮನುಷ್ಯ ಯಾವ ಪರಿಸ್ಥಿತಿಯಲ್ಲಿ, ಯಾವ ಮೂಡಿನಲ್ಲಿದ್ದರೂ ಅವನ ಹೃದಯವನ್ನು ಹಗುರಗೊಳಿಸಬಲ್ಲ ಸಾಹಿತ್ಯದ ಯಾವುದೇ ತುಣುಕು ಹಾಸ್ಯವೆನಿಸುತ್ತದೆ ಎಂದರು.

ಕಾಯಕ ಮತ್ತು ಧರ್ಮ ವೈಚಾರಿಕತೆ ಮತ್ತು ಧರ್ಮ. ನೈಜ ಸಮಾಜವಾದದ ಪರಿಕಲ್ಪನೆ ಎಂಬ ವಿಷಯ ಕುರಿತು ಕನ್ನಡ ಸಹ ಶಿಕ್ಷಕರಾದ ಮುಮ್ತಾಜ್ ಬೇಗಂ.ಕೆ. ಮಾತನಾಡಿ, ಕಾಯಕ ಎಂಬುದು ಒಂದು ನೆಲೆಯಲ್ಲಿ 'ವೃತ್ತಿ'ಯೇ ಆದರೂ, 'ಕಾಯಕ' ಎನ್ನುವುದು, ಈ ಶಿವಶರಣರ ಪ್ರಕಾರ ಕೇವಲ ವೃತ್ತಿ ಅಲ್ಲ; ಅದು ತಾನೊಬ್ಬ 'ಸಾಧಕ' ಎಂಬ ಭಾವದಿಂದ ಕೈಕೊಳ್ಳುವ ವೃತ್ತಿ. 'ವೃತ್ತಿ' ಮೂಲತಃ ಸಮಾಜದಲ್ಲಿ ಅವನವನ ವರ್ಣ-ವರ್ಗಗಳನ್ನು ನಿರ್ಣಯಿಸುವ ಮಾನದಂಡವಾಗಿತ್ತು; ಆದರೆ 'ಕಾಯಕ' ಮಾತ್ರ, ಅದರಲ್ಲಿ ತೊಡಗಿದ ಎಲ್ಲರನ್ನೂ 'ಶರಣ'ರೆಂಬ ಸಮಾನತೆಯ ನೆಲೆಯಲ್ಲಿ ನಿಲ್ಲಿಸುವ ಒಂದು ವಿಧಾನ ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಕೆ. ಉಚ್ಚಂಗೆಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಜ್ಯೋತಿಷ್ಯವು ಕೇವಲ ವಿಜ್ಞಾನವಲ್ಲ, ಇದು ದೈವಿಕ ವಿಜ್ಞಾನವಾಗಿದೆ. ಏಕೆಂದರೆ ಎಲ್ಲಾ ಗ್ರಹಗಳು ಮತ್ತು ನಕ್ಷತ್ರ ಪುಂಜಗಳನ್ನು ಕೇವಲ ಭೌತಿಕ ಘಟಕಗಳಾಗಿ ನೋಡಲಾಗುವುದಿಲ್ಲ.

ಆದರೆ ಅವು ಭೂಮಿಯ ಮೇಲಿನ ಜೀವನದ ಮೇಲೆ ಪ್ರಭಾವ ಬೀರುವುದರಿಂದ ಅವುಗಳನ್ನು ದೇವತೆಗಳಾಗಿ ಪೂಜಿಸಲಾಗುತ್ತದೆ. ಆದ್ದರಿಂದ, ಭಾರತದಲ್ಲಿ ಗ್ರಹಗಳನ್ನು ಪೂಜಿಸಲಾಗುತ್ತದೆ. ಸೂರ್ಯನನ್ನು ದೈವಿಕ ತಂದೆ, ಸೂರ್ಯ ನಾರಾಯಣ ಎಂದು ಪರಿಗಣಿಸಲಾಗುತ್ತದೆ ಮತ್ತು ಭೂಮಿಯನ್ನು ದೈವಿಕ ತಾಯಿ, ನಾರಾಯಣನ ಪತ್ನಿ 'ಭೂ ದೇವಿ' ಎಂದು ಪೂಜಿಸಲಾಗುತ್ತದೆ ಎಂದರು

ಕನ್ನಡ ಸಾಹಿತ್ಯ ಪರಿಷತ್ ಘಟಕದ ಗೌರವ ಕಾರ್ಯದರ್ಶಿಗಳಾದ ಆರ್ ಪದ್ಮರಾಜ ಜೈನ್, ಜಿ. ಮಹಾದೇವಪ್ಪ, ವಾರ್ಡನ್ ಎನ್.ಜಿ.ಬಸವರಾಜ, ಮಹಾದೇವಪ್ಪ ಸೇರಿದಂತೆ ಇತರರು ಇದ್ದರು.

# ಥೀಮ್ ಪಾರ್ಕ್ ಉತ್ತಮ ಯೋಜನೆ : ಎಸ್ಸೆಸ್ಸೆಂ

## ಅಗತ್ಯ ಸೌಲಭ್ಯಗಳ ಬಗ್ಗೆ ಮಾಸ್ಟರ್ ಪ್ಲಾನ್ ತಯಾರಿಸಲು ಸಚಿವರ ಸೂಚನೆ

ದಾವಣಗೆರೆ, ಮಾ.9- ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ನಿರ್ಮಿಸಲಾಗಿರುವ ಬಯಲು ರಂಗ ಮಂದಿರ ಹಾಗೂ ಥೀಮ್ ಪಾರ್ಕ್ ಉತ್ತಮವಾಗಿದೆ ಎಂದು ಶ್ಲಾಘಿಸಿರುವ ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಇನ್ನೂ ಆಗಬೇಕಾದ ಕೆಲಸಗಳ ಬಗ್ಗೆ ವಿಸ್ತೃತ ಯೋಜನೆ (ಮಾಸ್ಟರ್ ಪ್ಲಾನ್) ತಯಾರಿಸುವಂತೆ ಸೂಚಿಸಿದರು.

ಶನಿವಾರ ಸಂಜೆ ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನಗರದ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿ ನಿರ್ಮಿಸಲಾಗಿರುವ ಬಯಲು ರಂಗ ಮಂದಿರ ಹಾಗೂ ಥೀಮ್ ಪಾರ್ಕ್ ಉದ್ಘಾಟಿಸಿ ಅವರು ಮಾತನಾಡಿದರು.

ಉದ್ಘಾಟನೆ ಮಾಡಿದ ನಂತರ ಈ ಜಾಗವನ್ನು ಹಾಳು ಬಿಡಬಾರದು. ಸದಾ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿರಬೇಕು. ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಉತ್ತಮ ವಾತಾವರಣ ಸೃಷ್ಟಿಯಾಗಲಿ. ಕೇವಲ ರಾಜಕಾರಣಿಗಳನ್ನಷ್ಟೇ ಅನುದಾನ ಕೇಳಬೇಡಿ. ವಿಶ್ವವಿದ್ಯಾನಿಲಯಗಳಿಗೆ ಯುಜಿಸಿಯಿಂದ ಸಾಕಷ್ಟು ಅನುದಾನ ಬರುತ್ತದೆ. ರಸ್ತೆ, ಬೀದಿ ದೀಪ, ಸೌಂಡ್ ಸಿಸ್ಟಮ್ ಸೇರಿದಂತೆ ಸಮಗ್ರ ಯೋಜನೆ ರೂಪಿಸಿ. ನೀವು ಅನುದಾನ ತನ್ನಿ. ನಾನು ಅನುದಾನ ನೀಡುತ್ತೇನೆ ಎಂದು ದಾವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ ಅವರಿಗೆ ಸೂಚಿಸಿದರು.

2023ರಲ್ಲಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಅವರು ಬಯಲು ರಂಗ ಮಂದಿರ ನಿರ್ಮಿಸಿದರು. ಆಗ ನಾನೂ ಅದಕ್ಕೆ ಅನುದಾನ ನೀಡಿದ್ದೆ. ಅದೇ ಮಾದರಿಯಲ್ಲಿ ಇಂದು ದಾವಣಗೆರೆಯಲ್ಲೂ ಬಯಲು ರಂಗ ಮಂದಿರ ನಿರ್ಮಾಣವಾಗಿದೆ. ಸ್ಮಾರ್ಟ್ ಸಿಟಿ ಯೋಜನೆಗಳ ಪೈಕಿ ಇದೊಂದನ್ನು ಚೆನ್ನಾಗಿ ಡಿಸೈನ್ ಮಾಡಿದ್ದಾರೆ. ದಾವಣಗೆರೆಯಲ್ಲಿ ಇದೊಂದು ಉತ್ತಮ ಶಾಶ್ವತ ಕಾಮಗಾರಿ ಎಂದರೆ ತಪ್ಪಾಗಲಾರದು. ಬಾ.ಮ. ಬಸವರಾಜಯ್ಯ ಅವರ ತಂಡ ಉತ್ತಮ ಕೆಲಸ ಮಾಡಿದೆ ಎಂದು ಸಚಿವರು ಶ್ಲಾಘಿಸಿದರು.



### ಎಲ್ಲಾ ಉದ್ಘಾಟಿಸಿ ಪುಣ್ಯಕ್ಕೆ ಎರಡು ಬಿಟ್ಟಿದಾರೆ

'ಸ್ಮಾರ್ಟ್ ಸಿಟಿ ಯೋಜನೆಯಡಿ ಸಾಕಷ್ಟು ಅನುದಾನ ಬಂತು. ಸರಿಯಾಗಿ ಬಳಕೆ ಮಾಡಿಕೊಂಡಿದ್ರೆ ನಗರ ಮತ್ತಷ್ಟು ಸುಂದರವಾಗಿರ್ತಿತ್ತು. ಸರ್ಕಾರ ಹೋಗುತ್ತೆ ಅನ್ನೋ ತರಾತುರೀಲಿ ಅರ್ಧ ಆಗಿರೋ ಕಾಮಗಾರಿಗಳ್ನೂ ಉದ್ಘಾಟಿಸಿದ್ರು. ಅದ್ಯಾಕೋ ಬಸ್ ನಿಲ್ದಾಣ ಹಾಗೂ ಇದೊಂದು ಥೀಮ್ ಪಾರ್ಕ್ ಬಿಟ್ಟಿದಾರೆ. ಅದು ನನ್ನ ಪುಣ್ಯ'

ಶನಿವಾರ ಸಂಜೆ ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನಗರದ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿ ನಿರ್ಮಿಸಲಾಗಿರುವ ಬಯಲು ರಂಗ ಮಂದಿರ ಹಾಗೂ ಥೀಮ್ ಪಾರ್ಕ್ ಉದ್ಘಾಟಿಸಿದ ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮತ್ತೊಮ್ಮೆ ಬಿಜೆಪಿ ಮುಖಂಡರನ್ನು ತರಾಟೆಗೆ ತೆಗೆದುಕೊಂಡರು.

ಫೈನ್ ಆರ್ಟ್ಸ್ ಕಾಲೇಜು ಜಾಗದ ಮೇಲೆ ಬಹಳ ಜನರ ಕಣ್ಣಿತ್ತು. ಹಲವರ ಹೋರಾಟದ ಫಲವಾಗಿ ಕಾಲೇಜು ಜಾಗ ಉಳಿಸಿಕೊಳ್ಳಲಾಗಿದೆ. ದಾವಣಗೆರೆ ವಿವಿ ಆರಂಭಕ್ಕೂ ದಾನಿಗಳು ಜಾಗ ನೀಡಿದ್ದಾರೆ. ಸಾಕಷ್ಟು ಜನರ ಶ್ರಮವಿದೆ ಎಂದು ಸಚಿವ ಎಸ್ಸೆಸ್ಸೆಂ ಸ್ಮರಿಸಿದರು.

ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ. ಕುಂಬಾರ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ನಗರವಾಸಿ ಮಕ್ಕಳಿಗೆ ಹಸು ಹಾಗೂ ಎತ್ತಿನ ನಡುವಿನ ವ್ಯತ್ಯಾಸವೂ ತಿಳಿದಿರುವುದಿಲ್ಲ. ಈ ನಿಟ್ಟಿನಲ್ಲಿ ಮಕ್ಕಳಿಗೆ ಸಾಮಾನ್ಯ ಜ್ಞಾನ ಹಂಚಲು ಈ ಥೀಮ್ ಪಾರ್ಕ್ ಸಹಕಾರಿಯಾಗಲಿದೆ. ಇದನ್ನು ಪ್ರವಾಸಿ ತಾಣವನ್ನಾಗಿ ಮಾಡುವ ಅಗತ್ಯವಿದೆ ಎಂದರು.

ಸಾಹಿತಿ ಬಾ.ಮ. ಬಸವರಾಜಯ್ಯ ಮಾತನಾಡಿ, ಬಯಲು ರಂಗ ಮಂದಿರಕ್ಕೆ ರಸ್ತೆಯ ಅಗತ್ಯವಿದ್ದು, ಸಚಿವರು ಮಾಡಿಸಿ ಕೊಡಬೇಕು ಎಂದು ಮನವಿ ಮಾಡಿದರು. ಇಲ್ಲಿ ಅಧಿಕಾರಿಗಳು ವಸತಿ ಗೃಹ ನಿರ್ಮಾಣಕ್ಕೆ ಮುಂದಾಗಿದ್ದು, ಅವರಿಗೆ ಬುದ್ಧಿ ಹೇಳುವ ಕೆಲಸವನ್ನು ಸಚಿವರು ಮಾಡಬೇಕು ಎಂದರು.

ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಒಂದೂವರೆ ಎಕರೆ ಪ್ರದೇಶದಲ್ಲಿ ನಿರ್ಮಾಣವಾಗಿರುವ ಬಯಲು ರಂಗ ಮಂದಿರ ಹಾಗೂ ಥೀಮ್ ಪಾರ್ಕ್‌ಗೆ 5.23 ಕೋಟಿ ರೂ. ವೆಚ್ಚವಾಗಿದೆ. ಹಲವಾರು ಜನರ ಸಹಕಾರ, ಮಾರ್ಗದರ್ಶನದಿಂದ ಈ ಯೋಜನೆ ಸಫಲವಾಗಿದೆ ಎಂದರು.

### ಯುಜಿಸಿ ಅನುದಾನ ತರಿಸಿಕೊಳ್ಳಲು ದಾವಿವಿ ಕುಲಪತಿ ಕುಂಬಾರ್‌ಗೆ ಸಚಿವ ಎಸ್ಸೆಸ್ಸೆಂ ಸಲಹೆ

ರಂಗ ಮಂದಿರದಲ್ಲಿ 600 ಜನರು ಒಮ್ಮೆಲೇ ಕುಳಿತುಕೊಳ್ಳಬಹುದಾದ ವ್ಯವಸ್ಥೆ ಇದೆ. ಇವೆರಡನ್ನೂ ದಾವಣಗೆರೆ ವಿವಿಗೆ ಹಸ್ತಾಂತರ ಮಾಡಲಾಗುವುದು ಎಂದರು.

ಮುಖಂಡರುಗಳಾದ ಕೊಂಡಜ್ಜಿ ಜಯಪ್ರಕಾಶ್, ಸಿ.ಹೆಚ್. ಮುರುಗೇಂದ್ರಪ್ಪ, ಗಡಿಗುಡಾಳ್ ಮಂಜುನಾಥ್, ಎ.ನಾಗರಾಜ್, ಪಾಮೇನಹಳ್ಳಿ ನಾಗರಾಜ್, ಶ್ರೀಮತಿ ಅಲಕಾನಂದ, ವೀಣಾ ನಂಜಪ್ಪ, ಶಿವಕುಮಾರ್ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಪಿಂಜಾರ್, ನದಾಫ್ ಸಂಘದ ಜಿಲ್ಲಾ ಸಮಾವೇಶ

ದಾವಣಗೆರೆ, ಮಾ. 9- ಕರ್ನಾಟಕ ರಾಜ್ಯ ನದಾಫ್, ಪಿಂಜಾರ ಸಂಘದ ಜಿಲ್ಲಾ ಮತ್ತು ತಾಲ್ಲೂಕುಗಳ ಪುರುಷ ಮತ್ತು ಮಹಿಳಾ ಘಟಕಗಳ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಜಿಲ್ಲಾ ಸಮಾವೇಶ ನಾಳೆ ದಿನಾಂಕ 10 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹಳೆ ಪಿ.ಬಿ. ರಸ್ತೆಯ ಎಸ್.ಕೆ.ಎಸ್. ಕನ್ವೆನ್ಷನ್ ಹಾಲ್ ನಲ್ಲಿ ನಡೆಯಲಿದೆ ಎಂದು ದಾವಣಗೆರೆ ವಿಭಾಗೀಯ ಉಪಾಧ್ಯಕ್ಷ ಡಿ.ಬಿ. ಹಸನ್ ಪೀರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು. ರಾಜ್ಯಾಧ್ಯಕ್ಷ ಹೆಚ್.ಜಲೀಲ್ ಸಾಬ್ ಅಧ್ಯಕ್ಷತೆ ವಹಿಸಲಿದ್ದಾರೆ.

ಬೆಂಗಳೂರಿನ ಭಾವೈಕ್ಯ ಪೀಠದ ಸಂಗಮ್ ಆರ್. ಚಿಸ್ತಿ ಸಾನ್ನಿಧ್ಯ ವಹಿಸುವರು. ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಶಾಮನೂರು ಶಿವಶಂಕರಪ್ಪ, ಕೆ. ಅಬ್ದುಲ್ ಜಬ್ಬಾರ್, ಕೆ. ಎಸ್. ಬಸವಂತಪ್ಪ, ಡಿ.ಜಿ. ಶಾಂತನಗೌಡ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಹೆಚ್. ರಹೀಂ, ಎಂ. ಟಿಪ್ಪುಸುಲ್ತಾನ್, ಪಿ.ಕೆ. ರಾಜಾಸಾಬ್ ರಹಮತ್, ಹೊನ್ನೂರ್ ಸಾಬ್, ಹೆಚ್.ಜಿ. ಸುಭಾನಿ, ಶುಕ್ರುಸಾಬ್, ಸಲ್ಮಾನ್, ಮೋಸಿಮ್ ಅಕಿಲ್, ಜೆ. ಪರ್ವೇಜ್ ಮತ್ತಿತರರಿದ್ದರು.

## ಡಿಎಂಕೆ ಮೈತ್ರಿಕೂಟದ ಸೀಟು ಹಂಚಿಕೆ ಪೂರ್ಣ

ಚೆನ್ನೈ, ಮಾ. 9 – ಮುಂದಿನ ಲೋಕಸಭಾ ಚುನಾವಣೆಗಾಗಿ ತಮಿಳುನಾಡಿನ ಆಡಳಿತಾರೂಢ ಡಿ.ಎಂ.ಕೆ.ಯು ಮಿತ್ರ ಪಕ್ಷಗಳ ಜೊತೆ ಸೀಟು ಹಂಚಿಕೆ ಪೂರ್ಣಗೊಳಿಸಿದೆ.

ಡಿ.ಎಂ.ಕೆ. ಪಕ್ಷ 21 ಸೀಟುಗಳನ್ನು ಪಡೆದುಕೊಂಡಿದೆ. ಕಾಂಗ್ರೆಸ್ ಪಕ್ಷಕ್ಕೆ ಒಂಭತ್ತು ಸೀಟು ನೀಡಲಾಗಿದೆ. ಸಿಪಿಐ(ಎಂ), ಸಿಪಿಐ ಹಾಗೂ ವಿಸಿಕೆ ಪಕ್ಷಗಳು ತಲಾ ಎರಡು ಸೀಟು ಪಡೆದಿವೆ. ಎಂಡಿಎಂಕೆ, ಕೆಎಂಡಿಕೆ ಹಾಗೂ ಐಯುಎಂಎಲ್‌ಗಳಿಗೆ ತಲಾ ಒಂದು ಸೀಟು ನೀಡಲಾಗಿದೆ. ನಟ ಕಮಲ್ ಹಾಸನ್ ಅವರು ಎಂಎನ್‌ಎಂ ಪಕ್ಷವೂ ಮೈತ್ರಿಕೂಟಕ್ಕೆ ಸೇರ್ಪಡೆಯಾಗಿದೆ. ಆದರೆ, ಪಕ್ಷಕ್ಕೆ ಯಾವುದೇ ಸೀಟು ನೀಡಿಲ್ಲ. ಮುಂದಿನ ವರ್ಷ ನಡೆಯಲಿರುವ ರಾಜ್ಯಸಭಾ ಚುನಾವಣೆ ಸಂದರ್ಭದಲ್ಲಿ ಒಂದು ಸೀಟು ನೀಡಲಾಗುವುದು.

# ಬಿಐಇಟಿಯಲ್ಲಿ ನಮ್ಮ ಎತ್ನಿಕ್ - 2024

ದಾವಣಗೆರೆ, ಮಾ.9- ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ 'ನಮ್ಮ ಎತ್ನಿಕ್ - 2024' ಕಾರ್ಯಕ್ರಮ ಶನಿವಾರ ನಡೆಯಿತು.

ವಿದ್ಯಾರ್ಥಿಗಳು ಸಾಂಸ್ಕೃತಿಕ ಉಡುಗೆಯಲ್ಲಿ ಕಂಗೊಳಿಸಿದರು.

ವೆಲ್ಫೇರ್ ಕೌನ್ಸಿಲ್ ಮತ್ತು ವಿದ್ಯಾರ್ಥಿಗಳ ಸೃಜನ ಶೀಲತೆ ಕ್ಲಬ್ ವತಿಯಿಂದ ಹಮ್ಮಿಕೊಳ್ಳ ಲಾಗಿದ್ದ ಈ ಕಾರ್ಯಕ್ರಮದಲ್ಲಿ ಯುವತಿಯರು ಸೀರೆಯಲ್ಲಿ ಕಂಗೊಳಿಸಿದರೆ ಯುವಕರು ಪಂಚೆ ಶರ್ಟ್ ಶಲ್ಯೆ ತೊಟ್ಟು ಬಂದಿದ್ದರು.

ಕಾಲೇಜಿನ ಆವರಣದಲ್ಲಿ ಹಬ್ಬದ ವಾತಾವರಣ ನಿರ್ಮಾಣಗೊಂಡಿತ್ತು.

ಕೆಲವು ಯುವಕರು ಕೊಡಗು ಶೈಲಿಯ ಉಡುಗೆಯಲ್ಲಿದ್ದರು.

ಎತ್ತಿನ ಬಂಡಿ ಜೊತೆ ಬಂದ ಹುಡುಗರು ಹಳ್ಳಿ ವಾತಾವರಣ ನೆನಪಿಸಿದರು.

ಡೊಳ್ಳು ಕುಣಿತ ಕಾರ್ಯಕ್ರಮಕ್ಕೆ ಮೆರಗು ನೀಡಿತ್ತು.



# ನಗರದಲ್ಲಿಂದು ಲಯನ್ಸ್ ಸಮ್ಮೇಳನ



ದಾವಣಗೆರೆ, ಮಾ. 9- ಲಯನ್ಸ್ ಜಿಲ್ಲೆ-317 ಸಿ, ಪ್ರಾಂತ್ಯ- 9 ರ ಸಮ್ಮೇಳನವು ನಗರದ ಭಂಟರ ಭವನದಲ್ಲಿ ನಾಳೆ ದಿನಾಂಕ 10 ರಂದು ಸಂಜೆ 4 ಗಂಟೆಗೆ ನಡೆಯಲಿದೆ ಎಂದು ಲಯನ್ಸ್ ಪಿಆರ್‌ಓ ವಾಸುದೇವ ರಾಯ್ಕರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಲಯನ್ಸ್ ಪ್ರಾಂತೀಯ ಅಧ್ಯಕ್ಷ ಎಸ್. ಓಂಕಾರಪ್ಪ ಸಮ್ಮೇಳನದ ಅಧ್ಯಕ್ಷತೆ ವಹಿಸುವರು. ಪ್ರಾಂತ್ಯ-9 ರ ಪ್ರಥಮ ಮಹಿಳೆ ಲೀಲಾ ಓಂಕಾರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ನಿವೃತ್ತ ಜಿಲ್ಲಾಧಿಕಾರಿ ಅಮರನಾರಾಯಣ, ನಟ ಸೂರಜ್ ಹೊಳಲು ಭಾಗವಹಿಸಲಿದ್ದಾರೆ. ಲಯನ್ಸ್ ಕ್ಲಬ್ ವತಿಯಿಂದ ವಿವಿಧ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಲಾಗಿದೆ. ಅದರಲ್ಲಿ ವಿಶೇಷವಾಗಿ ಐದು ಹೊಲಿಗೆ ಯಂತ್ರಗಳು, 100 ಬೆಡ್‌ಶೀಟ್‌ಗಳು, 100 ಸೀರೆಗಳು, 1 ಬೈಸಿಕಲ್ (ತ್ರಿಚಕ್ರ), 2 ಸೈಕಲ್, ಐವರು ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಅಂಗವಿಕಲ ಮಗುವಿಗೆ 10 ಸಾವಿರ ರೂ., ಅನ್ನದಾನೇಶ್ವರ ಮಠಕ್ಕೆ 1 ಲಕ್ಷ ರೂ. ದೇಣಿಗೆ ನೀಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬೆಳ್ಳೂಡಿ ಶಿವಕುಮಾರ್, ಎನ್.ಸಿ. ಬಸವರಾಜ್, ರವಿಶಂಕರ್ ವಾಲಿ, ಉಮೇಶ್ ನೀಲಿ, ಎಸ್.ಕೆ. ಮಲ್ಲಿಕಾರ್ಜುನ್, ಹೆಚ್.ವಿ. ಮಂಜುನಾಥಸ್ವಾಮಿ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸ್ವಕುಳಸಾಳಿ ಸಮಾಜದಿಂದ ಮಹಿಳಾ ದಿನಾಚರಣೆ

ಸ್ವಕುಳಸಾಳಿ ಸಮಾಜದ ಮಹಿಳಾ ಮಂಡಳಿ ವತಿಯಿಂದ ಶ್ರೀ ಜಿಹ್ವೇಶ್ವರ ಮಂದಿರದಲ್ಲಿ ಇಂದು ಸಂಜೆ 4 ಗಂಟೆಗೆ ವಿಶ್ವ ಮಹಿಳಾ ದಿನಾಚರಣೆ ನಡೆಯಲಿದೆ.

ಸ್ವಕುಳಸಾಳಿ ಮಹಿಳಾ ಮಂಡಳಿಯ ಅಧ್ಯಕ್ಷರಾದ ಪದ್ಮಾವತಿ ವಾಂಜ್ರೆ ಅಧ್ಯಕ್ಷತೆ ವಹಿಸಲಿದ್ದು, ಲಲಿತಾ ಶಿವಾಜಿರಾವ್ ಢಗೆ, ಲಕ್ಷ್ಮಿ ಶ್ರೀನಿವಾಸ್ ಕ್ಷೀರಸಾಗರ, ರೇಖಾ ಸುರೇಶ್ ಢಗೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಡಾ. ಪೌರ್ಣಿಮಿ ರಮೇಶ್ ಏಕಬೋಟೆ, ಪೂಜಾ ಮಾರುತಿ ಏಕಬೋಟೆ, ಪೂಜಾ ಅಶೋಕ್ ಕಾಂಬ್ಳೆ ಮತ್ತು ಕೆ.ಜೆ. ನಯನ ಅವರಿಗೆ ಸನ್ಮಾನ ನಡೆಯಲಿದೆ.

ಹಿರಿಯ ದಂಪತಿಗಳಾದ ರಾಮಚಂದ್ರ ರೋಖಡೆ-ಸುಜಾತ ರಾಮಚಂದ್ರ ರೋಖಡೆ, ತಿಪ್ಪೇಸ್ವಾಮಿ ಏಕಬೋಟೆ- ಪ್ರತಿಭಾ ರಾಮಚಂದ್ರ ರೋಖಡೆ, ಲಕ್ಷ್ಮಣ ಢಗೆ- ಜಯಲಕ್ಷ್ಮಿ ಲಕ್ಷ್ಮಣ ಢಗೆ, ಸುಧಾಕರ ಸುರೆ- ಪಾರ್ವತಿ ಸುಧಾಕರ ಸುರೆ ಅವರಿಗೆ ಸನ್ಮಾನ ನಡೆಯಲಿದೆ.

## ನಗರದಲ್ಲಿ ಮತದಾನ ಜಾಗೃತಿ ಕವಿಗೋಷ್ಠಿ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಸದ್ಯದಲ್ಲೇ ನಡೆಯಲಿರುವ ಭಾರತದ ಲೋಕಸಭಾ ಚುನಾವಣೆಯ ಪ್ರಯುಕ್ತ ಸಾರ್ವಜನಿಕರು ಕರ್ತವ್ಯ ನಿಷ್ಠೆಯಿಂದ, ಬದ್ಧತೆಯಿಂದ ಮತ ಚಲಾಯಿಸುವ ಸದುದ್ದೇಶದಿಂದ 'ಮತದಾನ ಜಾಗೃತಿ' ಕವಿಗೋಷ್ಠಿ ಹಮ್ಮಿಕೊಳ್ಳಲಾಗಿದೆ.

ಸಮಾರಂಭದ ಉದ್ಘಾಟನೆಯನ್ನು ಹಿರಿಯ ಸಾಹಿತಿ ಶ್ರೀಮತಿ ಎ.ಸಿ. ಶಶಿಕಲಾ ಶಂಕರಮೂರ್ತಿ ನೆರವೇರಿಸಲಿದ್ದು. ಅಧ್ಯಕ್ಷತೆಯನ್ನು ಸಾಲಿಗ್ರಾಮ ಗಣೇಶ್ ಶೆಣೈ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ಚಿತ್ರದುರ್ಗದ ಸಾಹಿತಿ ಮಂಜುನಾಥ್, ರಾಣೇಬೆನ್ನೂರಿನ ಕವಿ ಪರಮೇಶ್ವರಯ್ಯ ವೀರಭದ್ರಯ್ಯ ಮಠದ ಆಗಮಿಸಲಿದ್ದಾರೆ. ಕಲಾಕುಂಚದ ಅಧ್ಯಕ್ಷ ಕೆ.ಹೆಚ್. ಮಂಜುನಾಥ್, ಹಿರಿಯ ಕವಯತ್ರಿ ಹೇಮಾ ಶಾಂತಪ್ಪ ಪೂಜಾರಿ ಗೌರವ ಉಪಸ್ಥಿತರಿರುತ್ತಾರೆ.

# ನಗರದಲ್ಲಿ ನಾಳೆಯಿಂದ ರಾಯರ ಸಪ್ತಾಹ ಮಹೋತ್ಸವ



### ಬೈಕ್ ರ್‍ಯಾಲಿಗೆ ಚಾಲನೆ ನೀಡಿದ ಸಂಪನ್ನ ಮುತಾಲಿಕ್

ದಾವಣಗೆರೆ, ಮಾ.9-ನಾಡಿದ್ದು ದಿನಾಂಕ 11 ರಿಂದ 17ರ ವರೆಗೆ ನಡೆಯಲಿರುವ 31ನೇ ಶ್ರೀ ರಾಘವೇಂದ್ರ ಸ್ವಾಮಿಗಳ ಸಪ್ತಾಹ ಮಹೋತ್ಸವದ ಅಂಗವಾಗಿ ನಗರದಲ್ಲಿ ಶನಿವಾರ ರಾಂ ಅಂಡ್ ಕೋ ವೃತ್ತದಿಂದ ಆಯೋಜಿಸಲಾಗಿದ್ದ ಬೈಕ್ ರ್‍ಯಾಲಿಗೆ ಮಹೋತ್ಸವ ಸಮಿತಿ ಅಧ್ಯಕ್ಷ ಸಂಪನ್ನ ಮುತಾಲಿಕ್ ಚಾಲನೆ ನೀಡಿದರು.

ರ್‍ಯಾಲಿ ಮೂಲಕ ನಗರದಲ್ಲಿ ಸಂಚರಿಸಿದ ರಾಯರ ಭಕ್ತರು, ರಾಘವೇಂದ್ರ ಸ್ವಾಮಿಗಳ ಸ್ಮರಣೆ, ಜೈ ಶ್ರೀರಾಮ್ ಘೋಷಣೆ ಕೂಗುವ ಮೂಲಕ ಸಪ್ತಾಹ ಮಹೋತ್ಸವ ಕುರಿತು ಜಾಗೃತಿ ಮೂಡಿ ಸಿದರು. ಬೈಕ್‌ಗಳಿಗೆ ರಾಯರ ಭಾವ ಚಿತ್ರವಿರುವ ಧ್ವಜಗಳನ್ನು ಕಟ್ಟಲಾಗಿತ್ತು.

ರ್‍ಯಾಲಿಯು ನಿಜಲಿಂಗಪ್ಪ ಬಡಾವಣೆ, ರಿಂಗ್ ರಸ್ತೆ ಮೂಲಕ ಪಿಬಿ ರಸ್ತೆಯಲ್ಲಿ ಸಾಗಿ, ಅರುಣಾ ಟಾಕೀಸ್ ವೃತ್ತ, ಪಿಜೆ ಬಡಾವಣೆ ರಾಘವೇಂದ್ರ ಸ್ವಾಮಿಗಳ ಮಠದ ಮಾರ್ಗವಾಗಿ ಎವಿಕೆ ಕಾಲೇಜು ರಸ್ತೆಯಿಂದ ಕೆಇಬಿ ವೃತ್ತ, ಶಿವಪ್ಪಯ್ಯ ಸರ್ಕಲ್, ಕೆ.ಬಿ. ಬಡಾವಣೆಯಲ್ಲಿ ಹಾದು ಹೋಗಿ, ಮಹಾತ್ಮ ಗಾಂಧಿ ಸರ್ಕಲ್ ಮೂಲಕ ತೆರಳಿ ರಾಘವೇಂದ್ರ ಸ್ವಾಮಿಗಳ ಮಠದ ಬಳಿ ಮುಕ್ತಾಯವಾಯಿತು.

ನಂತರ ಕೆಬಿ ಬಡಾವಣೆಯ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಾತನಾಡಿದ ಮಹೋತ್ಸವ ಸಮಿತಿಯ ಕಾರ್ಯದರ್ಶಿ ಕಂಪ್ಲಿ ಗುರುರಾಜಾ ಚಾರ್, ಸೋಮವಾರದಿಂದ 7 ದಿನಗಳ ಕಾಲ ನಗರದಲ್ಲಿ ನಡೆಯಲಿರುವ ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವದಲ್ಲಿ ಎಲ್ಲರೂ ಪಾಲ್ಗೊಳ್ಳುವ ಮೂಲಕ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ದಾವಣಗೆರೆಯ ಜನರಿಗೆ ಇದೊಂದು ಅಪರೂಪದ ಕಾರ್ಯಕ್ರಮವಾಗಿದೆ. 7 ದಿನಗಳ ಕಾಲ ನಿತ್ಯವೂ ಪೂಜೆ, ಪ್ರವಚನ, ದಾಸವಾಣಿ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಮಂಗಳವಾರ ಶ್ರೀ ಗುರುರಾಜರ ಶೋಭಾಯಾತ್ರೆ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಮಹೋತ್ಸವ ಸಮಿತಿಯ ಅಧ್ಯಕ್ಷ ಸಂಪನ್ನ ಮುತಾಲಿಕ್, ಕೋಶಾಧ್ಯಕ್ಷ ಡಾ.ಎಂ.ಸಿ. ಶಶಿಕಾಂತ್, ಸಹ ಕಾರ್ಯದರ್ಶಿಗಳಾದ ಎನ್.ಆರ್. ನಾಗಭೂಷಣರಾವ್, ಸತ್ಯಬೋಧ ಕುಲಕರ್ಣಿ, ಪಲ್ಲಕ್ಕಿವಾಸುದೇವಾಚಾರ್, ಕೆ. ರಘುನಾಥರಾವ್, ನಾಗರಾಜರಾವ್, ವಾಚಸ್ಪತಿ, ರಾಜಣ್ಣ, ಪ್ರಾಣೇಶಾಚಾರ್ ಕಡೂರು, ಮಣ್ಣೂರ್ ಗುರುರಾಜಾಚಾರ್, ಸರಯೂ ಮುತಾಲಿಕ್, ಗೀತಾ ಗುರುರಾಜಾಚಾರ್, ರೂಪಶ್ರೀ ಶಶಿಕಾಂತ್ ಭಾಗವಹಿಸಿದ್ದರು.

ಪಿ.ಸಿ. ರಾಮನಾಥ್, ಅನಿಲ್ ಬಾರೆಂಗಳ್, ಮಾಧವ ಪದಕಿ, ಶೇಷಾಚಲ, ಎಂ.ಜಿ. ಶ್ರೀಕಾಂತ್, ರಮೇಶ ಜಹಗೀರದಾರ್, ಅನಂತ ಪದ್ಮನಾಭ, ಪಿ.ಸಿ. ಶ್ರೀನಿವಾಸ್, ಗುರುರಾಜ ಕಡ್ಲೇಬಾಳ್, ರಾಮಚಂದ್ರರಾವ್, ಶಾನುಭೋಗ ರಾಮರಾವ್ ಪಾಲ್ಗೊಂಡಿದ್ದರು.

**ಭಜನೆ, ಚಂಡೆ ನಾದ:** ಬೈಕ್ ರ್‍ಯಾಲಿಗೂ ಮುನ್ನ ರಾಮ್ ಅಂಡ್ ಕೋ ವೃತ್ತದಲ್ಲಿ ಸೇರಿದ ವಿವಿಧ ಭಜನಾ ಮಂಡಳಿಗಳ ಸದಸ್ಯರು ದೇವರ ನಾಮಗಳನ್ನು ಹಾಡಿ ಭಕ್ತಿ ಸಮರ್ಪಿಸಿದರು. ನಂದಕಿಶೋರ ಭಜನಾ ಮಂಡಳಿ, ಭಾರತಿ ಭಜನಾ ಮಂಡಳಿ, ವಾಸವಿ ಯುವತಿಯರ ಭಜನಾ ಮಂಡಳಿ, ರಾಜರಾಜೇಶ್ವರಿ ಭಜನಾ ಮಂಡಳಿ, ಕಾಳಿಕಾಂಬಾ ಭಜನಾ ಮಂಡಳಿಯ ಸದಸ್ಯರು ಪಾಲ್ಗೊಂಡಿದ್ದರು. ಸುಶಮೀಂದ್ರ, ನಾಗರಾಜರಾವ್ ಮತ್ತು ಪೃಥ್ವಿ ಅವರು ಚಂಡೆ ವಾದ್ಯ ನುಡಿಸಿದ್ದು ರ್‍ಯಾಲಿಯ ಕಳೆಯನ್ನು ಹೆಚ್ಚಿಸಿತು.

# ನಗರದಲ್ಲಿ ಇಂದು ಟಿ.ಎಸ್. ಪಾಟೀಲರ ಸ್ಮರಣೋತ್ಸವ

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಹಾಗೂ ಶ್ರೀ ಗುರು ಬಸವ ಮಂಟಪದ ಸಹಯೋಗದಲ್ಲಿ ಇಂದು ಬೆಳಿಗ್ಗೆ 9 ಗಂಟೆಗೆ ಎಂ.ಸಿ.ಸಿ. ಎ ಬ್ಲಾಕ್ 5 ನೇ ಮುಖ್ಯ ರಸ್ತೆಯಲ್ಲಿರುವ ಶ್ರೀ ಗುರು ಬಸವ ಮಂಟಪದಲ್ಲಿ ಲಿಂ. ಟಿ.ಎಸ್. ಪಾಟೀಲ್ ಗುರುಗಳ ಸ್ಮರಣೋತ್ಸವ ಹಾಗೂ ಕಬ್ಬೂರು ಕಲ್ಕಮ್ಮ ಮತ್ತು ಮಂಡ್ಲೂರ ತಿಮ್ಮಪ್ಪ ದತ್ತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ಗುರು ಬಸವ ಮಂಟಪದ ಎಂ. ಹನುಮಂತಪ್ಪ ಐಗೂರು ಅಧ್ಯಕ್ಷತೆ ವಹಿಸುವರು. 'ಪ್ರಾತ ಸ್ಮರಣೀಯ ಟಿ. ಎಸ್. ಪಾಟೀಲರು' ಕುರಿತು ವಿಶ್ರಾಂತ ಪ್ರಾಚಾರ್ಯ ಡಾ. ನಾ.ಲೋಕೇಶ್ ಒಡೆಯರ್ ಮಾತನಾಡಲಿದ್ದಾರೆ.

ಬಿಐಇಟಿ ಇ ಅಂಡ್ ಸಿ ವಿಭಾಗದ ಮುಖ್ಯಸ್ಥರಾದ ಡಾ.ಜಿ.ಎಸ್. ಸುನೀತ ದತ್ತಿ ದಾನಿಗಳ ಪರಿಚಯ ಮಾಡಿಕೊಡಲಿದ್ದಾರೆ. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಗಾಯತ್ರಿ ವಸ್ತ್ರದ್, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಎಂ. ಪರಮೇಶ್ವರಪ್ಪ, ಉಪಾಧ್ಯಕ್ಷ ಬುಳ್ಳಾಪುರದ ಮಲ್ಲಿಕಾರ್ಜುನಸ್ವಾಮಿ, ತಾಲ್ಲೂಕು ಘಟಕದ ಅಧ್ಯಕ್ಷ ಎಸ್.ಬಿ. ರುದ್ರಗೌಡ ಗೋಪನಾಳು, ಕದಳಿ ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷೆ ಮಮತಾ ನಾಗರಾಜ್ ಭಾಗವಹಿಸಲಿದ್ದಾರೆ.

## ಇಂದು ಗೈಡ್ಸ್ ಸಮಾವೇಶ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಸಂಸ್ಥೆ ಮತ್ತು ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ನಗರದ ರೋಟರಿ ಬಾಲ ಭವನದಲ್ಲಿ ಇಂದು ಬೆಳಗ್ಗೆ 10.30ಕ್ಕೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಗೈಡ್ ಆಯುಕ್ತರುಗಳ ಸಮಾವೇಶ ಆಯೋಜಿಸಲಾಗಿದೆ.

ಎಸ್‌ಎಸ್ ಕೇರ್ ಟ್ರಸ್ಟ್‌ನ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಗೈಡ್ಸ್ ರಾಜ್ಯ ಆಯುಕ್ತರಾದ ಗೀತಾ ನಟರಾಜ್ ಅಧ್ಯಕ್ಷತೆ ವಹಿಸುವರು. ರಾಜ್ಯ ಮುಖ್ಯ ಗೈಡ್ಸ್ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ, ರಾಜ್ಯ ಆಯುಕ್ತ ಬಿ.ವಿ. ರಾಮಲತಾ, ಜಿಲ್ಲಾ ಮುಖ್ಯ ಆಯುಕ್ತ ಮುರುಘರಾಜೇಂದ್ರ ಜೆ. ಚಿಗಟೇರಿ ಕಾರ್ಯಕ್ರಮದಲ್ಲಿ ಭಾಗವಹಿಸುವರು.



THE Raymond SHOP
RAM & CO CIRCLE DAVANGERE
FREE STITCHING
AVAILABLE FOR TROUSER & SHIRT.
MARCH 12TH - MARCH 16TH
OFFER VALID ONLY AT RAM & CO CIRCLE.
'SRI RAGHAVENDRA BUILDING', NEAR RAM & CO CIRCLE, DAVANGERE. 9008530584

# 125 ಅಡಿ ಎತ್ತರದ ಬರ್ಫುಕನ್ ಪ್ರತಿಮೆ



ಜೋರ್ಹಟ್, ಮಾ. 9 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಸ್ಸಾಂನ ಜೋರ್ಹಟ್ ಜಿಲ್ಲೆಯಲ್ಲಿ 125 ಅಡಿ ಎತ್ತರದ ಅಹೋಮ್ ಯೋಧ ಲಚಿತ್ ಬರ್ಫುಕನ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಿದ್ದಾರೆ.

ಈ ಶೌರ್ಯ ಪ್ರತಿಮೆಯು 84 ಅಡಿ ಎತ್ತರ ಹಾಗೂ ಪೀಠವು 41 ಅಡಿ ಎತ್ತರದ್ದಾಗಿದೆ. ಒಟ್ಟಾರೆ ಎತ್ತರ 125 ಅಡಿಯಾಗಿದೆ.

ಲಚಿತ್ ಬರ್ಫುಕನ್ ಮೈದಾನ್ ಅಭಿವೃದ್ಧಿ ಯೋಜನೆ ಪ್ರದೇಶದಲ್ಲಿ ಬೃಹತ್ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. 16.5 ಎಕರೆ ವ್ಯಾಪ್ತಿಯಲ್ಲಿರುವ ಈ ಪ್ರದೇಶ ವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಲಾಗಿದೆ.

ಮಾಜಿ ರಾಷ್ಟ್ರಪತಿ ರಾಮ ನಾಥ ಕೋವಿಂದ್ ಅವರು ಫೆಬ್ರವರಿ 2022ರಲ್ಲಿ ಪ್ರತಿಮೆಗೆ ಶಿಲಾನ್ಯಾಸ ನೆರವೇರಿಸಿದ್ದರು.

ಲಚಿತ್ ಬರ್ಫುಕನ್ ಅವರು ಅಹೋಮ್ ಸಾಮ್ರಾಜ್ಯದ ಧೀರ ಸೈನ್ಯಾಧಿಕಾರಿಯಾಗಿದ್ದರು. 1671ರಲ್ಲಿ ಅವರ ನಾಯಕತ್ವದಲ್ಲಿ ಸರೈಘಾಟ್ ಸಮರ ನಡೆದಿತ್ತು. ರಾಜಾ ರಾಮ್‌ಸಿಂಗ್ ನೇತೃತ್ವದ ಬೃಹತ್ ಮೊಘಲ್ ಸೈನ್ಯವನ್ನು ಅವರು ಹಿಮ್ಮೆಟ್ಟಿಸಿ ಅಹೋಮ್ ಸಾಮ್ರಾಜ್ಯವನ್ನು ರಕ್ಷಿಸಿದ್ದರು. ಪದ್ಮಭೂಷಣ ಪ್ರಶಸ್ತಿ ವಿಜೇತ ರಾಮ್ ವಂಚಿ ಸುತರ್ ಅವರು ಪ್ರತಿಮೆಯನ್ನು ಉತ್ತರ ಪ್ರದೇಶದ ಘಾಜಿಯಾಬಾದ್‌ನಲ್ಲಿ ರೂಪಿಸಿದ್ದರು. ನಂತರ ಪ್ರತಿಮೆಯನ್ನು ಬಿಡಿ ಭಾಗಗಳಲ್ಲಿ ತಂದು ಅಸ್ಸಾಂನಲ್ಲಿ ಮತ್ತೆ ಜೋಡಿಸಲಾಗಿದೆ.

# ನಿಪ್ಪಾಣಿಯ ರಾಮ ಮಂದಿರಕ್ಕೆ ಬೆದರಿಕೆ ಪತ್ರ

ನಿಪ್ಪಾಣಿ, ಮಾ. 9 - ಬೆಳಗಾವಿ ಜಿಲ್ಲೆಯ ನಿಪ್ಪಾಣಿಯ ರಾಮ ಮಂದಿರ ಸ್ಫೋಟಿಸುವುದಾಗಿ ಅನಾಮಧೇಯ ಪತ್ರವೊಂದು ದೇವಸ್ಥಾನದ ಗರ್ಭಗುಡಿಯಲ್ಲಿ ಪತ್ತೆಯಾಗಿದೆ.

ನಗರದ ಶ್ರೀರಾಮ ಮಂದಿರದಲ್ಲಿ ಫೆ. 7 ರಂದು ಹಿಂದಿ ಭಾಷೆಯಲ್ಲಿ ಬರೆದ ಪತ್ರ ಪತ್ತೆಯಾಗಿದೆ. ಇದಲ್ಲದೆ ಹನುಮಂತ ದೇವರ ದೇವಸ್ಥಾನದಲ್ಲಿ ಮತ್ತೊಂದು ಪತ್ರ ಪತ್ತೆಯಾಗಿದೆ.

ನಂತರ ಪೊಲೀಸ್ ತೀವ್ರ ಎಚ್ಚರಿಕೆ ವಹಿಸಿದ್ದಾರೆ. ದೇವಸ್ಥಾನ ಬಳಿ ಹೆಚ್ಚಿನ ಪೊಲೀಸ್ ಪಡೆ ನಿಯೋಜಿಸಲಾಗಿದ್ದು ಸಿಸಿಟಿವಿ ಅಳವಡಿಸಲಾಗಿದೆ. ಈ ಬಗ್ಗೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಪ್ರತಿಕ್ರಿಯೆ ನೀಡಿದ್ದು, ಈ ಬಗ್ಗೆ ನಮ್ಮ ಪೊಲೀಸರು ಇಲಾಖೆ ಎಚ್ಚರಿಕೆ ವಹಿಸುತ್ತದೆ. ಎಲ್ಲಾ ದೇವಸ್ಥಾನಗಳಿಗೂ ಸೂಕ್ತ ಭದ್ರತೆ ನೀಡಲು ಸೂಚನೆ ನೀಡುತ್ತೇನೆ ಎಂದಿದ್ದಾರೆ.

# 12ಕ್ಕೆ ದಾವಣಗೆರೆ ವಿವಿ ಘಟಿಕೋತ್ಸವ

ದಾವಣಗೆರೆ, ಮಾ. 9 - ದಾವಣಗೆರೆ ವಿಶ್ವವಿದ್ಯಾನಿಲಯದ 11ನೇ ಘಟಿಕೋತ್ಸವವು ಇದೇ ದಿನಾಂಕ 12 ರಂದು ಬೆಳಿಗ್ಗೆ 11 ಗಂಟೆಗೆ ತೋಳಹುಣಸೆಯಲ್ಲಿನ ಜ್ಞಾನಸೌಧ ಶಿವಗಂಗೋತ್ರಿ ಆವರಣದಲ್ಲಿ ನಡೆಯಲಿದೆ. ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಉಪಸ್ಥಿತರಿರುವರು. ಇಸ್ರೋ ಮಾಜಿ ಅಧ್ಯಕ್ಷರಾದ ಎ.ಎಸ್ ಕಿರಣ್ ಕುಮಾರ್ ಮುಖ್ಯ ಅತಿಥಿಗಳಾಗಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ದಾವಿವಿ ಕುಲಪತಿ ಪ್ರೊ.ಬಿ.ಡಿ.ಕುಂಬಾರ, ಕುಲಸಚಿವ ಪ್ರೊ.ರಮೇಶ.ಸಿ.ಕೆ, ಕುಲಸಚಿವ (ಪ್ರಭಾರ) ಪ್ರೊ. ವೆಂಕಟರಾವ್ ಎಂ.ಪಲಾಟೆ ಭಾಗವಹಿಸುವರು.

ಬೇಕಾಗಿದ್ದಾರೆ
ರವಿತೇಜ ಟೆಕ್ಸ್‌ಟೈಲ್ಸ್
ಅಂಗಡಿಯಲ್ಲಿ ಅನುಭವವುಳ್ಳ ಸೇಲ್ಸ್ ಮೆನ್, ಸೇಲ್ಸ್ ಗರ್ಲ್ಸ್ ಕೆಲಸ ಮಾಡಲು ಬೇಕಾಗಿದ್ದಾರೆ.
98803 82611

# ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

ದಾವಣಗೆರೆ, ಮಾ.9- ನಗರದ ಪ್ರವಾಸಿ ಮಂದಿರದಲ್ಲಿ ಇದೇ ದಿನಾಂಕ 13ರ ಬುಧವಾರ ಬೆಳಗ್ಗೆ 11ರಿಂದ ಮಧ್ಯಾಹ್ನ 1.30ರ ವರೆಗೆ ರಾಜ್ಯ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು.

ಅಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಎಂ.ಎಸ್. ಕೌಲಾಪೂರೆ, ಅಧಿಕಾರಿಗಳಾದ ಸಿ. ಮಧುಸೂದನ್, ಪ್ರಭು ಬಿ. ಸೂರಿನ, ಎಚ್.ಎಸ್ ರಾಷ್ಟ್ರಪತಿ ಅಹವಾಲು ಸ್ವೀಕರಿಸುವರು.

MAHA TVS WANTED
Sales Executives Qualification : Diploma in Automobile or Mechanical, ITI Candidates
Experience in 2 wheeler sales, good in communication
CONTACT : MAHA AUTOMOBILE
#5961, Opp. Vani Rice Mill, Shivakumara, Swamy Layout, Hadadi Road, Davanagere.
M. : 7353852851

ಭಾರತೀಯ ಜನತಾ ಪಕ್ಷದ
ರಾಜ್ಯ ಎಸ್.ಟಿ. ಮೋರ್ಚಾ ರಾಜ್ಯ ಕಾರ್ಯಕಾರಣಿ
ಸದಸ್ಯರಾಗಿ ನೇಮಕಮಾಡಲು ಸಹಕರಿಸಿದ
ಮಾಜಿ ಕೇಂದ್ರ ಸಚಿವರು ಹಾಗೂ ಲೋಕಸಭಾ ಸದಸ್ಯರು
ಶ್ರೀ ಜಿ.ಎಂ. ಸಿದ್ದೇಶ್ವರ ರವರು
ರೈತ ನಾಯಕ ಮಾಜಿ ಸಚಿವರಾದ
ಶ್ರೀ ಎಸ್.ಎ ರವೀಂದ್ರನಾಥ್ ರವರು
ರಾಜ್ಯ ಎಸ್.ಟಿ. ಮೋರ್ಚಾ ರಾಜ್ಯಾಧ್ಯಕ್ಷರಾದ
ಶ್ರೀ ಬಂಗಾರು ಹನುಮಂತು
ರಾಜ್ಯ ಎಸ್.ಟಿ. ಮೋರ್ಚಾ ರಾಜ್ಯ ಉಪಾಧ್ಯಕ್ಷರಾದ
ಶ್ರೀ ಶ್ರೀನಿವಾಸ ದಾಸಕರಿಯಪ್ಪ
ದಾವಣಗೆರೆ ಬಿ.ಜೆ.ಪಿ ಜಿಲ್ಲಾಧ್ಯಕ್ಷರಾದ
ಎಸ್. ರಾಜಶೇಖರ್ ನಾಗಪ್ಪ
ದಾವಣಗೆರೆ ಜಿಲ್ಲಾ
ಎಸ್.ಟಿ. ಮೋರ್ಚಾ ಜಿಲ್ಲಾಧ್ಯಕ್ಷರು
ಕೆ.ಎಸ್ ಕೃಷ್ಣಕುಮಾರ್
ಹಾಗೂ ಹಿತೈಷಿಗಳಿಗೆ ನಮ್ಮ
ಹೃತ್ಪೂರ್ವಕ ಕೃತಜ್ಞತೆಗಳು
ಗುಮ್ಮನೂರು ಶ್ರೀನಿವಾಸ
ರಾಜ್ಯ ಕಾರ್ಯಕಾರಣಿ ಸದಸ್ಯರು,
ಬಿ.ಜೆ.ಪಿ ಎಸ್.ಟಿ. ಮೋರ್ಚಾ.
ಹೆಚ್.ಬಿ ದುರುಗೇಶ್
ರಾಜ್ಯ ಕಾರ್ಯಕಾರಣಿ ಸದಸ್ಯರು,
ಬಿ.ಜೆ.ಪಿ ಎಸ್.ಟಿ. ಮೋರ್ಚಾ.

18ನೇ ವರ್ಷದ ಪುಣ್ಯಸ್ಮರಣೆ
ದಿ|| ಶರಣ ಆರ್.ಜಿ. ಬಸವರಾಜ್ ಬಿ.ಇ.
ನೀವು ನಮ್ಮನ್ನಗಲಿ ಇಂದಿಗೆ 18 ವರ್ಷಗಳಾದವು.
ನಿಮ್ಮ ನೆನಪುಗಳೇ ನಮಗೆ ದಾರಿ ದೀಪವಾಗಿವೆ.
ಸದಾ ನಿಮ್ಮ ಸ್ಮರಣೆಯಲ್ಲಿರುವ
ಪತ್ನಿ: ಶ್ರೀಮತಿ ಗೌಡ್ರ ಕುಸುಮ ಬಸವರಾಜ್ ಮತ್ತು
ಮಕ್ಕಳಾದ: ಸಚಿನ್ ಬಸವರಾಜ್, ಚಿ|| ಸಾವನ್ ಬಸವರಾಜ್ ಮತ್ತು ಸೊಸೆ: ಶ್ರೀಮತಿ ಸುಪ್ರೀತ ಸಚಿನ್
ಶ್ರೀಮತಿ ಲಲಿತಮ್ಮ ಮತ್ತು ಗೌಡ್ರ ಡಿ. ಸದಾಶಿವಪ್ಪ ಮತ್ತು ಮಕ್ಕಳು, ರಾಮಗೊಂಡನಹಳ್ಳಿ.
ಗೌಡ್ರ ರುದ್ರಮ್ಮ ಉಮಾಪತಿ ಮತ್ತು ಮಕ್ಕಳು, ರಾಮಗೊಂಡನಹಳ್ಳಿ.
ಶ್ರೀಮತಿ ಸರ್ವಮಂಗಳಮ್ಮ ಪುರದಪ್ಪ ಮತ್ತು ಮಕ್ಕಳು ಹಾಗೂ ಸೊಸೆಯಂದಿರು
ಶ್ರೀಮತಿ ಗಂಗಮ್ಮ ಮತ್ತು ಶ್ರೀ ವೀರಣ್ಣ ಹಾಗೂ ಮಕ್ಕಳು, ಸಿದ್ದನೂರು.
ಶ್ರೀಮತಿ ಪ್ರೇಮ ಮತ್ತು ಶ್ರೀ ಪರ್ವತಪ್ಪ ಮತ್ತು ಮಕ್ಕಳು, ಬೂದಿಹಾಳ್.
ಶ್ರೀಮತಿ ಸಾವಿತ್ರಮ್ಮ ಮತ್ತು ಶ್ರೀ ಗೌಡ್ರ ಪ್ರಭುದೇವ್ ಹಾಗೂ ಮಕ್ಕಳು, ಶಾಮನೂರು ಮತ್ತು
ಶ್ರೀಮತಿ ಪ್ರತಿಭಾ ಮತ್ತು ಶ್ರೀ ಕೊಂಡಜ್ಜಿ ಜಯಪ್ರಕಾಶ್, ಸಹೋದರರು, ಸೊಸೆಯಂದಿರು,
ಶ್ರೀಮತಿ ಗೌರಮ್ಮ ಮತ್ತು ಶ್ರೀ ಎಸ್.ಕೆ.ಮಂಜುನಾಥ ಮತ್ತು ಮಕ್ಕಳು ಕೆಂಚಮ್ಮನಾಗತಿಹಳ್ಳಿ, ಪಲ್ಲಾಗಟ್ಟೆ
ಆರ್.ಜಿ.ಹಳ್ಳಿ ಗೌಡ್ರ ವಂಶಸ್ಥರು, ಬಂಧು-ಮಿತ್ರರು ಪ್ರೇರಣ ಯುವ ಸಂಸ್ಥೆ, ದಾವಣಗೆರೆ.
ಮೊ: 9844476087, 9538440307, 8884040442

ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ www.hindusmatrimony.com
SGM Tours ಎಸ್‌ಜಿಎಂ ಟೂರ್ಸ್
ಬಾಣಾಪುರಮಠ ಆಸ್ಪತ್ರೆ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
ರೈಲು/ವಿಮಾನ ಮತ್ತು ಬಸ್ಸಿನಲ್ಲಿ
14 ದಿನಗಳು ಚಾರ್‌ಧಾಮ್ ವಿಶೇಷ ಯಾತ್ರೆ ಮೇ 2024 ರಿಂದ
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ)
ಸಂದರ್ಶಿಸುವ ಸ್ಥಳಗಳು : ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.
ಕಾಶಿ ಯಾತ್ರೆ
ಸಂದರ್ಶಿಸುವ ಸ್ಥಳಗಳು : ಕಾಶಿ, ಅಯೋಧ್ಯ, ಗಯಾ, ಬುದ್ದಗಯಾ, ಪ್ರಯಾಗ್‌ರಾಜ್,
ಅಮರ್‌ನಾಥ, ವೈಷ್ಣೋದೇವಿ ವಿಶೇಷ ಪ್ರವಾಸ 4 ಜುಲೈ 2024 ರಿಂದ 9 ದಿನಗಳು
ಸಂದರ್ಶಿಸುವ ಸ್ಥಳಗಳು : ಜಮ್ಮು, ಕಟ್ರಾ, ವೈಷ್ಣೋದೇವಿ, ಅಮೃತ್‌ಸರ್
ಸಂಚಾಲಕರು : ವೇ|| ಲೋಕೇಶಯ್ಯ ಎಂ.
78925 10652, 94481 59303, 80509 52637
ಕೆಲವೇ ಸೀಟುಗಳು ಮಾತ್ರ ಲಭ್ಯ

Sapthagiri Trust (R.)
SAPTHAGIRI PU COLLEGE
Chigateri Layout, Kunduvada Road, Davangere-06
REQUIRES THE FOLLOWING
Applications have been invited from qualified candidates to teach PU board, NEET, JEE and KCET

| Sl. No. | Position | Posts | Education Qualification | Minimum Experience |
|---|---|---|---|---|
| 1) | Academic Director | 2 | M.Sc, B.Ed | 10 Years |
| 2) | HR | 4 | MBA | 2 Years |
| 3) | Computer Science | 2 | M.Sc, (C.S), Engg (C.S) | 5 Years |
| 4) | Biology | 2 | M.Sc, B.Ed | 10 Years |
| 5) | Physics | 2 | M.Sc, B.Ed | 10 Years |
| 6) | Chemistry | 2 | M.Sc, B.Ed | 10 Years |
| 7) | Mathematics | 2 | M.Sc, B.Ed | 10 Years |
| 8) | Warden (Male) | 4 | Any Degree | 4 Years |
| 9) | Warden (Female) | 4 | Any Degree | 4 Years |
| 10) | Physcial Director | 2 | Any Degree | 2Years |
| 11) | Tele Caller | 2 | Any Degree | 4 Year |
| 12) | Main Cook | 4 | | 2 Year |
| 13) | Kitchen Helper | 6 | | 2 Years |
| 14) | Bus Drivers | 4 | | 5 Years |
| 15) | Washroom Cleaner | 4 | | |

Selected candidates will be provide Boarding and Attractive Salary.
Send your resume : icando0786@gmail.com
Contact : 9741113392, 9606648777, Toll Free Number : 1800-309-0915
Admissions in progress for NEET, KCET Crash Course

ದಾವಣಗೆರೆಯ ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ನಿರ್ಮಿಸಿದ
ವಿವಿಧ ಕಾಮಗಾರಿಗಳ ಉದ್ಘಾಟನಾ ಸಮಾರಂಭ
ದಿನಾಂಕ : 10.03.2024ರ ಭಾನುವಾರ
ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು
ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು
ಮತ್ತು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು ಇವರಿಂದ

| ಸಂ | ಉದ್ಘಾಟನಾ ಕಾಮಗಾರಿಗಳು | ಸ್ಥಳ ಮತ್ತು ಸಮಯ |
|---|---|---|
| 1 | ಪಾದಾಚಾರಿ ರಸ್ತೆ ಅಭಿವೃದ್ಧಿ ಕಾಮಗಾರಿ ಹಂತ - 2 – ರೂ. 14.83 ಕೋಟಿ | ಶ್ರೀ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದ ಮುಂಭಾಗ - ತರಳಬಾಳು ಬಡಾವಣೆ 1ನೇ ಮುಖ್ಯರಸ್ತೆ ದಾವಣಗೆರೆ. - 3.30 ಗಂಟೆಗೆ |
| 2 | ತರಳಬಾಳು ಬಡಾವಣೆ 1 ಮತ್ತು 2ನೇ ಮುಖ್ಯ ರಸ್ತೆಯಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಹದಡಿ ರಸ್ತೆಯಿಂದ ಕೆ.ಪಿ.ಟಿ.ಸಿ.ಎಲ್. ಬಳಿಯ ಚಿಕ್ಕಮ್ಮಣಿ ಬಡಾವಣೆ ಜಂಕ್ಷನ್‌ವರೆಗೆ ಸಿ.ಸಿ. ರಸ್ತೆ ಕಾಮಗಾರಿ. – ರೂ. 5.70 ಕೋಟಿ | |
| 3 | ರಿಂಗ್ ರೋಡ್ – ರೂ. 46.32 ಕೋಟಿ | ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಮುಂಭಾಗ, ರಿಂಗ್ ರಸ್ತೆ, ದಾವಣಗೆರೆ. 4.00 ಗಂಟೆಗೆ |
| 4 | ಕುಂದುವಾಡ ಕೆರೆ ಅಭಿವೃದ್ಧಿ ಕಾಮಗಾರಿ – ರೂ. 15.00 ಕೋಟಿ | |
| 5 | ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ 17 ಅಂಗನವಾಡಿ ಕಟ್ಟಡಗಳ ನಿರ್ಮಾಣ ಕಾಮಗಾರಿ - ರೂ. 2.51 ಕೋಟಿ | |

ಈ ಕಾಮಗಾರಿಗಳ ಉದ್ಘಾಟನಾ ಸಮಾರಂಭಕ್ಕೆ ಆಗಮಿಸುತ್ತಿರುವ, ಸ್ಮಾರ್ಟ್ ಸಿಟಿ ಅಧಿಕಾರಿಗಳೂ, ಮಹಾನಗರ ಪಾಲಿಕೆಯ ಮಹಾಪೌರರು, ಆಯುಕ್ತರು, ಸದಸ್ಯರುಗಳು ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ
ಹೃದಯಪೂರ್ವಕ ಸ್ವಾಗತ ಸುಸ್ವಾಗತ
ಪ್ರಕಟಣೆ : ದಾವಣಗೆರೆ ಜಿಲ್ಲಾ ಕಾಂಗ್ರೆಸ್